◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED24 NEWS
हर ख़बर, हर शहर

# ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

ತೇಜ್ | ಸಟೀಕ | ನಿಷ್ಪಕ್ಷ | ಜನಹಿತ ಮೇಂ | ಸಚ ಕೀ ಆವಾಜ್ | ಜನ-ಜನ ಕೀ ಆವಾಜ್ | ನಿಡರ ಪತ್ರಕಾರಿತಾ



# ಮಸ್ಕಿಯಲ್ಲಿ ಸಂಘಟನಾ ಸೃಜನ ಅಭಿಯಾನ - ಜಿ.ಪಂ, ತಾ.ಪಂ ಚುನಾವಣೆಗೆ ಸಂಘಟನೆ ಸದೃಢಗೊಳಿಸಿ - ಗ್ಯಾರಂಟಿ ಯೋಜನೆ ಮನೆಮನೆಗೆ ತಲುಪಿಸಿ - ರಾಜಶೇಖರ ಪಾಟೀಲ್ ಹುಮನಾಬಾದ್ ಕರೆ




ಮಸ್ಕಿ:

ಇಂದು ಮಸ್ಕಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ವತಿಯಿಂದ ಆಯೋಜಿಸಲಾಗಿದ್ದ ಸಂಘಟನಾ ಸೃಜನ ಅಭಿಯಾನ ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ರಾಯಚೂರು ಜಿಲ್ಲಾ ಕಾಂಗ್ರೆಸ್ ವೀಕ್ಷಕ ಶ್ರೀ ರಾಜಶೇಖರ ಪಾಟೀಲ್ ಹುಮನಾಬಾದ್ ಅವರು ಭಾಗವಹಿಸಿ ಮಾತನಾಡಿದರು.

ಮುಂಬರುವ ದಿನಗಳಲ್ಲಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಚುನಾವಣೆಗಳು ನಡೆಯಲಿದ್ದು, ಪಕ್ಷದ ಕಾರ್ಯಕರ್ತರು ಸಂಘಟನೆಯನ್ನು ಮತ್ತಷ್ಟು ಸದೃಢಗೊಳಿಸಬೇಕು. ಬೂತ್ ಮಟ್ಟದ ಕಾರ್ಯಕರ್ತರು ನಿರಂತರವಾಗಿ ಸಾರ್ವಜನಿಕರ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳ ಕುರಿತು ಪ್ರತಿಯೊಬ್ಬರೂ ಮನೆಮನೆಗೆ ತೆರಳಿ ಜನರಿಗೆ ಮಾಹಿತಿ ತಲುಪಿಸುವ ಕಾರ್ಯ ಮಾಡಬೇಕೆಂದು ಹೇಳಿದರು.

ಮಸ್ಕಿ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀ ಆರ್. ಬಸನಗೌಡ ತುರ್ವಿಹಾಳ, ರಾಯಚೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಶಾಂತಪ್ಪ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಖನಿಜ ಅಭಿವೃದ್ಧಿ ನಿಗಮ ನಿರ್ದೇಶಕ ಹನುಮಂತಪ್ಪ ಮುದ್ದಾಪೂರ, ಎಪಿಎಂಸಿ ಅಧ್ಯಕ್ಷ ಸಿದ್ದನಗೌಡ ಮಾಟೂರು, ಗ್ಯಾರಂಟಿ ಯೋಜನಾ ಸಮಿತಿ ಅಧ್ಯಕ್ಷ ಮೈಬುಸಾಬ ಮುದ್ದಾಪೂರ, ಕೈಮಗ್ಗ ಅಭಿವೃದ್ಧಿ ನಿಗಮದ ನಿರ್ದೇಶಕ ಆದನಗೌಡ ಸಂತೆಕಲ್ಲೂರು, ತೊಗರಿ ನಿಗಮದ ನಿರ್ದೇಶಕ ನಿರುಪಾದಪ್ಪ ವಕೀಲರು, ಕೆಪಿಸಿಸಿ ಪರಿಶಿಷ್ಟ ಪಂಗಡ ಕಾರ್ಯದರ್ಶಿ ಬಸನಗೌಡ ಮಾರಲದಿನ್ನಿ, ರೇಣುಕಾ ಸಿಂಧ್ಯ, ಜಾನ್ ವೆಸ್ಲಿ, ಎಚ್.ಬಿ. ಮುರಾರಿ, ಬಸನಗೌಡ ಪೂಪಾ, ಕೃಷ್ಣ ಡಿ. ಚಿಗರಿ, ಹನುಮೇಶ ಬಾಗೋಡಿ, ವಿಜಯ ಕರೇಕಲ್, ನಾಗರತ್ನ ಕಟ್ಟೀಮನಿ ಸೇರಿದಂತೆ ಪಕ್ಷದ ಹಲವಾರು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

— Ningappa

HEALTH

## ಔರಾದ್‌ನಲ್ಲಿ ಒಳಚರಂಡಿ ಸ್ವಚ್ಛಗೊಳಿಸಲು ಸಾರ್ವಜನಿಕರು ಕೈಹಾಕಿದರು



ಔರಾದ್ (ಕರ್ನಾಟಕ) – ಪಟ್ಟಣದ ವಾರ್ಡ್ ಸಂಖ್ಯೆ 2 ಮತ್ತು 9ರಲ್ಲಿ ಒಳಚರಂಡಿಗಳು ಗಬ್ಬು ನಾರುತಿದ್ದು, ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬೇಸಿಕೊಂಡು ಸ್ಥಳೀಯ ನಿವಾಸಿಗಳು ಸ್ವತಃ ಚರಂಡಿಗೆ ಇಳಿದು ಸ್ವಚ್ ಗೊಳಿಸಿದ ದೃಶ್ಯಗಳು ಕಂಡುಬಂದಿವೆ.

ಗಬ್ಬು ನಾರುತಿರುವ ಚರಂಡಿಗಳಿಂದ ಉಂಟಾಗುವ ದುರ್ವಾಸನೆ ಮತ್ತು ನೀರಿನ ಪ್ರವಾಹ ಸಮಸ್ಯೆಗಳಿಂದ ಸಾರ್ವಜನಿಕರ ಆರೋಗ್ಯಕ್ಕೆ ಅಪಾಯ ಹೆಚ್ಚಾಗಿದೆ. ಈ ಪರಿಸ್ಥಿತಿಯನ್ನು ಗಮನಿಸಿ, ಪಟ್ಟಣದ ಆರೋಗ್ಯ ನಿರೀಕ್ಷಕ ಮೊಹಮ್ಮದ್ ಸಮೀರ್ ಅವರ ನಿರ್ಲಕ್ಷ್ಯವನ್ನು ನಿವಾಸಿಗಳು ಆರೋಪಿಸಿದ್ದಾರೆ.

ಪಂಚಾಯತ್ ಆರೋಗ್ಯ ನಿರೀಕ್ಷಕ ಮೊಹಮ್ಮದ್ ಸಮೀರ್ ಅವರು ಸುಮಾರು ಎಂಟು ವರ್ಷಗಳಿಂದ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸ್ವಚ್ಛತೆ ಕಾಪಾಡುವಲ್ಲಿ ನಿರ್ಲಕ್ಷ್ಯ ತೋರಿದ್ದಾರೆ ಎಂದು ಸ್ಥಳೀಯ ನಾಯಕ ರತ್ನದೀಪ್ ಕಸ್ತೂರೆ ಹೇಳಿದ್ದಾರೆ.

ಅಧಿಕಾರಿಗಳು ಮಾಡಬೇಕಾದ ಕೆಲಸವನ್ನು ಸಾರ್ವಜನಿಕರೇ ಮಾಡಬೇಕಾದ ಪರಿಸ್ಥಿತಿ ಔರಾದ್‌ನಲ್ಲಿ ನಿರ್ಮಾಣವಾಗಿದೆ. ರತ್ನದೀಪ್ ಕಸ್ತೂರೆ ಸಂಬಂಧಪಟ್ಟ ಅಧಿಕಾರಿಗಳನ್ನು ಎಚ್ಚರಿಸಿ, ಒಳಚರಂಡಿಗಳನ್ನು ತಕ್ಷಣ ಸ್ವಚ್ಛಗೊಳಿಸಿ, ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಸ್ಥಳೀಯ ಸಮುದಾಯವು ಸ್ವಚ್ಛತಾ ವ್ಯವಸ್ಥೆಯ ಸುಧಾರಣೆಗೆ ತಕ್ಷಣದ ಕ್ರಮಗಳನ್ನು ಬೇಡಿಕೊಂಡು, ಆರೋಗ್ಯ ಮತ್ತು ಪರಿಸರದ ರಕ್ಷಣೆಗೆ ಅಧಿಕಾರಿಗಳ ಜವಾಬ್ದಾರಿಯನ್ನು ಹೇರಿಕೊಳ್ಳುವಂತೆ ವಿನಂತಿ ಮಾಡಿದೆ.

— Md Asif khan

JOBS & CAREER

## ಪಿರಿಯಾಪಟ್ಟಣದಲ್ಲಿ ಸರ್ಕಾರಿ ನೌಕರರಿಗಾಗಿ ಕ್ರೀಡಾ ಮಹೋತ್ಸವ ಮತ್ತು ಉಚಿತ ಆರೋಗ್ಯ ಶಿಬಿರದ ಉದ್ಘಾಟನೆ



ಶನಿವಾರ ಪಿರಿಯಾಪಟ್ಟಣದ ಹೊರವಲಯದಲ್ಲಿರುವ ತಾಲ್ಲೂಕು ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪಿರಿಯಾಪಟ್ಟಣ ಶಾಖೆಯ ಆಯೋಜನೆಯ ಕ್ರೀಡಾಕೂಟ, ವಾರ್ಷಿಕ ಮಹಾಸಭೆ ಹಾಗೂ ಉಚಿತ ಆರೋಗ್ಯ ಶಿಬಿರವನ್ನು ತಾಲ್ಲೂಕು ಆಶ್ರಯ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಉದ್ಘಾಟಿಸಿದರು.

ಉದ್ಘಾಟನಾ ಭಾಷಣದಲ್ಲಿ ನಿತಿನ್ ವೆಂಕಟೇಶ್ ಕ್ರೀಡೆ ಕೇವಲ ಯುವಜನತೆಗೆ ಸೀಮಿತವಲ್ಲ, ಎಲ್ಲ ವಯೋಮಾನದವರಿಗೂ ಆರೋಗ್ಯಕರ ಜೀವನಕ್ಕೆ ಸಹಾಯಕವೆಂದು ತಿಳಿಸಿದರು. ಸರ್ಕಾರಿ ನೌಕರರು ದೈನಂದಿನ ಕರ್ತವ್ಯದ ಒತ್ತಡದ ನಡುವೆ ಈ ರೀತಿಯ ಕ್ರೀಡಾಕೂಟಗಳಲ್ಲಿ ಪಾಲ್ಗೊಳ್ಳುವುದರಿಂದ ದೈಹಿಕ ಹಾಗೂ ಮಾನಸಿಕ ದೃಢತೆಯನ್ನು ಪಡೆಯಬಹುದು ಮತ್ತು ವರ್ಷಕ್ಕೆ ಕನಿಷ್ಠ ಎರಡು ಬಾರಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಮೈಸೂರು ಬಣ್ಣ ಮತ್ತು ಅರಗು ಸಂಸ್ಥೆಯ ಅಧ್ಯಕ್ಷ ಎಚ್.ಡಿ. ಗಣೇಶ್ ಉಚಿತ ಆರೋಗ್ಯ ಶಿಬಿರವನ್ನು ಸ್ವಾಗತಾರ್ಹ ಎಂದು ಹೇಳಿ, ಕ್ರೀಡೆ ಮತ್ತು ಮನರಂಜನಾ ಚಟುವಟಿಕೆಗಳು ಒತ್ತಡದ ಜೀವನದಲ್ಲಿ ಉಲ್ಲಾಸ ಮತ್ತು ಚೈತನ್ಯ ನೀಡುತ್ತವೆ ಎಂದು ಅಭಿಪ್ರಾಯಪಟ್ಟರು. ಭವಿಷ್ಯದಲ್ಲಿ ಇಂತಹ ಗುಣಮಟ್ಟದ ಕಾರ್ಯಕ್ರಮಗಳನ್ನು ಹೆಚ್ಚುವರಿಯಾಗಿ ಆಯೋಜಿಸಲು ಸಂಘ ಮುಂದಾಗಬೇಕು ಎಂದು ಅವರು ಪ್ರಸ್ತಾಪಿಸಿದರು.

ಗಣೇಶ್ ತಮ್ಮ ಭಾವಚಿತ್ರವನ್ನು ಕಾರ್ಯಕ್ರಮದ ಫ್ಲಕ್ಸ್ ಬೋರ್ಡ್‌ನಲ್ಲಿ ಸೇರಿಸದಿರುವುದನ್ನು ಅವಮಾನ ಎಂದು ವ್ಯಕ್ತಪಡಿಸಿ, ಆಯೋಜಕರ ವಿರುದ್ಧ ವಾಗ್ದಾಳಿ ನಡೆಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ನಿತಿನ್ ವೆಂಕಟೇಶ್ ಯಾವುದೇ ಸರ್ಕಾರಿ ನೌಕರರಿಗೂ ಭಾವಚಿತ್ರವನ್ನು ಹೊರತುಪಡಿಸುವಂತೆ ಸೂಚನೆ ನೀಡಿಲ್ಲ ಎಂದು ತಿರುಗೇಟು ನೀಡಿದರು ಮತ್ತು ಕಾರ್ಯದರ್ಶಿ ಕ್ಷಮೆಯಾಚಿಸಿದರು.

ಕಾರ್ಯಕ್ರಮದಲ್ಲಿ ಹೊಸಳ್ಳಿ ಕೃಷ್ಣೇಗೌಡ, ಸಂಘದ ಅಧ್ಯಕ್ಷ, ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಕಾಂಗ್ರೆಸ್ ಮುಖಂಡರು, ಗಣ್ಯರು, ಪತ್ರಕರ್ತರು ಮತ್ತು ನೌಕರರು ಹಾಜರಿದ್ದರು. ಸಂಘದಲ್ಲಿ ಕೆಲಸ ಮಾಡಿದ್ದರೂ ವರ್ಗಾವಣೆಗೊಂಡಿರುವ ಲಕ್ಷ್ಮೀದೇವಿ, ಗಣೇಶ್ ಮತ್ತು ವಿಶ್ವನಾಥ್ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

— Vasanthakumar C S

## ಲಿಂಗಸಗೂರು ಬಸ್ ನಿಲ್ದಾಣದ ಕಂಪೌಂಡ್ ಒಳಗೆ ಅಂಗಡಿ - ಸಾರ್ವಜನಿಕರಿಗೆ ತೊಂದರೆ, ಮಹಿಳೆಯರ ಸುರಕ್ಷತೆಗೆ ಆತಂಕ - ತೆರವುಗೊಳಿಸಿ, ತನಿಖೆಗೆ ಸಾರ್ವಜನಿಕರ ಒತ್ತಾಯ




ಲಿಂಗಸಗೂರು ಬಸ್ ನಿಲ್ದಾಣದ ಕಂಪೌಂಡ್ ಒಳಗೆ ಅಂಗಡಿ - ಸಾರ್ವಜನಿಕರಿಗೆ ತೊಂದರೆ, ಮಹಿಳೆಯರ ಸುರಕ್ಷತೆಗೆ ಆತಂಕ

ಲಿಂಗಸಗೂರು: ಪಟ್ಟಣದ ಅತಿಥಿ ಹೋಟೆಲ್ ಮುಂಭಾಗದಲ್ಲಿರುವ ಬಸ್ ನಿಲ್ದಾಣದ ಕಂಪೌಂಡ್ ಒಳಭಾಗದಲ್ಲಿ ಅಂಗಡಿ ಇಟ್ಟಿರುವುದು ಕಂಡುಬಂದಿದೆ. ಬಸ್ ನಿಲ್ದಾಣವು ಸಾರ್ವಜನಿಕರ ಬಳಕೆಗೆ ಮೀಸಲಾಗಿರುವ ಸ್ಥಳವಾಗಿದ್ದು, ಇಲ್ಲಿ ಅಂಗಡಿ ಇಟ್ಟಿರುವುದರಿಂದ ಬಸ್‌ಗಾಗಿ ಕಾಯುವ ಪ್ರಯಾಣಿಕರು ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

ವಿಶೇಷವಾಗಿ ಮಹಿಳೆಯರು, ಮಕ್ಕಳು ಹಾಗೂ ವೃದ್ಧರು ಬಸ್ ನಿಲ್ದಾಣಕ್ಕೆ ಬಂದು ಹೋಗುವ ಸಂದರ್ಭದಲ್ಲಿ ಅನಾನುಕೂಲತೆ ಮತ್ತು ಮುಜುಗರ ಅನುಭವಿಸುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಸಾರ್ವಜನಿಕರ ಆತಂಕ ವ್ಯಕ್ತವಾಗಿದೆ.

ಸಾರ್ವಜನಿಕರ ಅನುಕೂಲಕ್ಕಾಗಿ ನಿರ್ಮಿಸಿರುವ ಬಸ್ ನಿಲ್ದಾಣದ ಕಂಪೌಂಡ್ ಒಳಗೆ ಅಂಗಡಿ ಇಡಲು ಯಾವ ಅಧಿಕಾರಿಗಳು ಅನುಮತಿ ನೀಡಿದ್ದಾರೆ? ಯಾವ ನಿಯಮದಡಿ ಈ ಅಂಗಡಿಯನ್ನು ನಡೆಸಲಾಗುತ್ತಿದೆ? ಎಂಬ ಪ್ರಶ್ನೆಗಳು ಸಾರ್ವಜನಿಕರಲ್ಲಿ ಮೂಡಿವೆ.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಅಂಗಡಿಯನ್ನು ತೆರವುಗೊಳಿಸಬೇಕು. ಅಂಗಡಿ ಇಡಲು ಅನುಮತಿ ನೀಡಿರುವ ಅಧಿಕಾರಿಗಳು ಅಥವಾ ಸಂಬಂಧಪಟ್ಟವರ ಪಾತ್ರದ ಬಗ್ಗೆ ತನಿಖೆ ನಡೆಸಿ, ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.

ಸಾರ್ವಜನಿಕರ ಹಿತಾಸಕ್ತಿ ಹಾಗೂ ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿ, ಈ ಸಮಸ್ಯೆಗೆ ಆದಷ್ಟು ಬೇಗ ಪರಿಹಾರ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

— Ningappa

ನಿರ್ಮಿಸಿರುವ ಬಸ್ ನಿಲ್ದಾಣದ ಕಂಪೌಂಡ್ ಒಳಗೆ ಅಂಗಡಿ ಇಡಲು ಯಾವ ಅಧಿಕಾರಿಗಳು ಅನುಮತಿ ನೀಡಿದ್ದಾರೆ? ಯಾವ ನಿಯಮದಡಿ ಈ ಅಂಗಡಿಯನ್ನು ನಡೆಸಲಾಗುತ್ತಿದೆ? ಎಂಬ ಪ್ರಶ್ನೆಗಳು ಸಾರ್ವಜನಿಕರಲ್ಲಿ ಮೂಡಿವೆ.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ, ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಅಂಗಡಿಯನ್ನು ತೆರವುಗೊಳಿಸಬೇಕು. ಅಂಗಡಿ ಇಡಲು ಅನುಮತಿ ನೀಡಿರುವ ಅಧಿಕಾರಿಗಳು ಅಥವಾ ಸಂಬಂಧಪಟ್ಟವರ ಪಾತ್ರದ ಬಗ್ಗೆ ತನಿಖೆ ನಡೆಸಿ, ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.

ಸಾರ್ವಜನಿಕರ ಹಿತಾಸಕ್ತಿ ಹಾಗೂ ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಿ, ಈ ಸಮಸ್ಯೆಗೆ ಆದಷ್ಟು ಬೇಗ ಪರಿಹಾರ ಕಲ್ಪಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

— Ningappa

## ಬದಾಮಿ ಕುರಿ ಕಳ್ಳರ ಹಾವಳಿ



ಬದಾಮಿ ತಾಲೂಕಿನ ಯರಗೊಪ್ಪ ಎಸ್.ಬಿ. ಗ್ರಾಮದಲ್ಲಿ ಕಳ್ಳತನಕ್ಕೆ ಯತ್ನ: ಚಾಕು ತೋರಿಸಿ ಕುರಿ ಕದ್ದೊಯ್ದ ಕಳ್ಳರು!

ಬದಾಮಿ: ತಾಲೂಕಿನ ಯರಗೊಪ್ಪ ಎಸ್.ಬಿ. ಗ್ರಾಮದಲ್ಲಿ ಮಧ್ಯರಾತ್ರಿ 4ರಿಂದ 5 ಜನರ ಗುಂಪೊಂದು ಕಳ್ಳತನಕ್ಕೆ ಯತ್ನಿಸಿರುವ ಘಟನೆ ನಡೆದಿದೆ.

ಗ್ರಾಮದ ಎಲ್ಲಪ್ಪ ಶಂಕ್ರಪ್ಪ ಕೊಪ್ಪದ ಅವರಿಗೆ ಸೇರಿದ ಕುರಿದೊಡ್ಡಿಗೆ ಮಧ್ಯರಾತ್ರಿ ನುಗ್ಗಿದ ಕಳ್ಳರ ಗುಂಪು ಒಂದು ಕುರಿಯನ್ನು ಕದ್ದುಕೊಂಡು ಹೋಗಿದೆ. ಈ ವೇಳೆ ಚಾಕು ತೋರಿಸಿ ಭಯ ಹುಟ್ಟಿಸಿ ಕಳ್ಳರು ಪರಾರಿಯಾಗಿದ್ದಾರೆ ಎಂದು ತಿಳಿದುಬಂದಿದೆ.

ಈ ಘಟನೆಯಿಂದ ಗ್ರಾಮಸ್ಥರಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ. ಆದ್ದರಿಂದ ಯರಗೊಪ್ಪ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ರಾತ್ರಿ ವೇಳೆ ಹೆಚ್ಚಿನ ಜಾಗ್ರತೆ ವಹಿಸಬೇಕು.


ರಾತ್ರಿ ವೇಳೆ ಅನುಮಾನಾಸ್ಪದ ವ್ಯಕ್ತಿಗಳು ಕಂಡುಬಂದರೆ ಎಚ್ಚರಿಕೆ ವಹಿಸಿ.

ಕುರಿದೊಡ್ಡಿ, ದನದ ಕೊಟ್ಟಿಗೆ ಹಾಗೂ ಮನೆಗಳ ಭದ್ರತೆಗೆ ಆದ್ಯತೆ ನೀಡಿ.

ಗ್ರಾಮಸ್ಥರು ರಾತ್ರಿ ಪಾಳಿಯಲ್ಲಿ ಕಾವಲು ಕಾಯುವ ವ್ಯವಸ್ಥೆ ಮಾಡಿಕೊಳ್ಳಿ.

— Banneppa Kuntoji

## ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ - ರವಿ ಹಂಜ್ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಆಗ್ರಹ - ಬಸವ ಮಂಟಪ ಕೃತಿ ಮುಟ್ಟುಗೋಲು, ಸುಮೋಟೋ ಕೇಸ್ ದಾಖಲಿಸಿ ಶಿಕ್ಷೆಗೆ ಒಳಪಡಿಸಿ - ಚಂದ್ರಶೇಖರ ನಾಡಗೌಡ ಒತ್ತಾಯ



ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ - ರವಿ ಹಂಜ್ ವಿರುದ್ಧ ಕಠಿಣ ಕಾನೂನು ಕ್ರಮಕ್ಕೆ ಆಗ್ರಹ

ಜಾಲಹಳ್ಳಿ, ನ.21:

ರಾಜ್ಯದ ಸಾಂಸ್ಕೃತಿಕ ನಾಯಕ, ಸಮಾನತೆಯ ಹರಿಕಾರ, ಜಗಜ್ಯೋತಿ ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಅನಿವಾಸಿ ಭಾರತೀಯ ಲೇಖಕ ರವಿ ಹಂಜ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪತ್ರಕರ್ತರು ಹಾಗೂ ಬಸವ ಸಮಿತಿ ಸಂಚಾಲಕರಾದ ಚಂದ್ರಶೇಖರ ನಾಡಗೌಡ ಒತ್ತಾಯಿಸಿದ್ದಾರೆ.

ಸಮಾನತೆ, ಮಾನವೀಯ ಮೌಲ್ಯಗಳು ಹಾಗೂ ಜಾತಿ ರಹಿತ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಬಸವಣ್ಣನವರ ಕುರಿತು ರವಿ ಹಂಜ್ ನೀಡಿರುವ ಹೇಳಿಕೆಗಳು ಬಸವ ಅನುಯಾಯಿಗಳ ಭಾವನೆಗಳಿಗೆ ನೋವುಂಟು ಮಾಡಿದೆ.

ಬಸವಣ್ಣನವರ ವಚನಗಳನ್ನು ಉಲ್ಲೇಖಿಸುವ ನೆಪದಲ್ಲಿ ಅವರ ತತ್ವಾದರ್ಶಗಳನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ. ಬಸವಣ್ಣನವರು ಬಿಜ್ಜಳನ ಬಂಡಾರವನ್ನು ಕದ್ದವರು ಹಾಗೂ ಬಿಜ್ಜಳನ ಹತ್ಯೆಗೆ ಕಾರಣರಾದವರು ಎಂಬ ಅರ್ಥದಲ್ಲಿ ಹೇಳಿಕೆ ನೀಡುವ ಮೂಲಕ ಇತಿಹಾಸವನ್ನು ತಿರುಚುವ ಪ್ರಯತ್ನ ಮಾಡಿದ್ದಾರೆ.

ಇಂತಹ ಹೇಳಿಕೆಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ, ಗೌರವಕ್ಕೆ ಕಳಂಕ ತರುತ್ತವೆ.

ಬಸವಣ್ಣನವರು ಯಾವುದೇ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಾದವರಲ್ಲ ಅವರ ಸಮಾನತೆ ಕಾಯಕ ಹಾಗೂ ದಾಸೋಹದ ಸಂದೇಶಗಳು ಇಡೀ ಮನುಕುಲಕ್ಕೆ ಮಾರ್ಗದರ್ಶಿಯಾಗಿವೆ.

ರಾಜ್ಯ ಸರ್ಕಾರವೇ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವ ಸಂದರ್ಭದಲ್ಲಿ ಅವರ ಕುರಿತು ಅವಹೇಳನಕಾರಿ ಹೇಳಿಕೆಗಳನ್ನು ನೀಡುವುದು ಖಂಡನೀಯವಾಗಿದೆ.

ಕಳೆದ ಎರಡು ವರ್ಷಗಳಿಂದ ರವಿ ಹಂಜ್ ಅವರು ಬಸವಣ್ಣನವರ ಕುರಿತು ವಿವಾದಾತ್ಮಕ ವಿಷಯಗಳನ್ನು ಒಳಗೊಂಡ ಅಂಕಣಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತಿದ್ದರು. ಈಗ ಅವುಗಳನ್ನು ಬಸವ ಮಂಟಪ ಎಂಬ ಕೃತಿಯ ರೂಪದಲ್ಲಿ ಹೊರ ತಂದಿದ್ದಾರೆ. ಅಲ್ಲದೆ ಯೂಟ್ಯೂಬ್ ಚಾನಲ್ ಒಂದರಲ್ಲಿ ಮಾತನಾಡುವ ಸಂದರ್ಭದಲ್ಲಿ ಲಿಂಗಾಯತ ಸಮುದಾಯವನ್ನು ಲಿಂಗ ಹತರು ಎಂದು ಸಂಬೋಧಿಸುವ ಮೂಲಕ ಸಮುದಾಯದ ಭಾವನೆಗಳಿಗೆ ದಕ್ಕೆ ತಂದಿದ್ದಾರೆ. 12ನೇ ಶತಮಾನದಲ್ಲಿಯೇ ಕ್ರಾಂತಿಕಾರಿ ಬದಲಾವಣೆಗೆ ಕಾರಣರಾಗಿರುವ ಮಹಾ ಮಾನವತಾವಾದಿಯಾಗಿ ಜಗಜ್ಯೋತಿಯಾಗಿ ಬೆಳಗಿದ ಬಸವಣ್ಣನವರನ್ನು ಕುರಿತು ರವಿ ಹಂಜ್ ಸೇರಿದಂತೆ ಯಾರೇ ನಿಂದನೆ ಮಾಡಿದರೂ ಸಹಿಸಲಾಗದು.

ಬಸವಣ್ಣನವರ ಆಶಯಗಳಾದ ಸಮಾನತೆ ಕಾಯಕ ಮತ್ತು ದಾಸೋಹದ ಚಿಂತನೆಗಳು ಈ ಭೂಮಿ ಇರುವವರೆಗೂ ಶಾಶ್ವತವಾಗಿ ಜೀವಂತವಾಗಿರುತ್ತವೆ. 12ನೇ ಶತಮಾನದಿಂದ 21ನೇ ಶತಮಾನದವರೆಗೂ ಬಸವ ತತ್ವ ಮತ್ತು ಶರಣರ ವಿಚಾರಧಾರೆಗಳನ್ನು ಹತ್ತಿಕ್ಕಲು, ವಿರೂಪಗೊಳಿಸಲು, ನಾಶಪಡಿಸಲು ಪಟ್ಟಭದ್ರ ಹಿತಾಸಕ್ತಿಗಳು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಅವು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಒಂದು ನೆನಪಿರಲಿ ಶರಣರ ವಿಚಾರಧಾರೆಗಳಿಗೆ ಸಾವಿಲ್ಲ, ಸಮಾನತೆಯ ಚಿಂತನೆಗೆ ಅಂತ್ಯವಿಲ್ಲ ಕಾಲ ಬದಲಾಗಬಹುದು, ಆಡಳಿತ ಬದಲಾಗಬಹುದು ಆದರೆ ಬಸವಣ್ಣನವರ ಮಾನವೀಯತೆ, ಸಮಾನತೆ, ತತ್ವಗಳನ್ನು ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ. ಸಂಕವ್ವನಂತಹ ಶೋಷಣೆಗೊಳಪಟ್ಟ ಮಹಿಳೆಯರಿಗೆ ಲಿಂಗ ದೀಕ್ಷೆಯನ್ನು ನೀಡಿ ವಾಕ್ ಸ್ವಾತಂತ್ರ್ಯದಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದಲ್ಲದೆ ಇಡೀ ಮಹಿಳಾ ಕುಲಕ್ಕೆ ಸಮಾನತೆ ಕಲ್ಪಿಸುವಲ್ಲಿ ಅವಿರತವಾಗಿ ಶ್ರಮಿಸಿದ ಮಹಾನ್ ಚೇತನ ಶಕ್ತಿ ಬಸವಣ್ಣ ಅವರ ಕುರಿತು ನಿಂದನೆ ಸಹಿಸಲಾಗದು.

ಯಾವುದೇ ಶೋಷಣೆ ಇಲ್ಲದ ಆತಂಕವಿಲ್ಲದ, ಅಡ್ಡಿಯಿಲ್ಲದ ಬದುಕನ್ನು ಬದುಕಬೇಕೆಂಬ ಸಕಲ ಜೀವಾತ್ಮರಿಗೆ ಲೇಸನ್ನ ಬಯಸಿ ಹೋರಾಡಿದವರು ವಿಶ್ವಗುರು ಬಸವಣ್ಣನವರು ಇಂತಹ ಮಹಾನ್ ವ್ಯಕ್ತಿ ಚಾರಿತ್ರದ ಬಗ್ಗೆ ಕೀಳಾಗಿ ಮಾತನಾಡಿದ ರವಿ ಹಂಜ್ ಎನ್ನುವ ಅವಿವೇಕಿಯು ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ಐತಿಹಾಸಿಕ, ಸಾಹಿತಿಕ ಆಧಾರವಿಲ್ಲದೆ ಹೇಳಿಕೆ ಕೊಟ್ಟಿರುವುದು ಖಂಡನೀಯವಾಗಿದೆ. ರವಿ ಹಂಜ್ ಅವರ ಮುಖ್ಯ ಉದ್ದೇಶ ಬಸವಣ್ಣನವರ ಚಾರಿತ್ರಿಕ ವಧೆ ಮಾಡುವುದು ಮತ್ತು ವಚನ ಸಾಹಿತ್ಯವನ್ನು ವಿಡಂಬಿಸಿ, ವ್ಯಂಗ್ಯವಾಗಿ ಮಾತನಾಡುವುದು ಮೇಲ್ನೋಟಕ್ಕೆ ಸಾಬೀತಾಗುತ್ತದೆ. ಆತನ ಹಿಂದೆ ಕಾಣಲಾರದ ಕುಹಕ ಶಕ್ತಿಗಳ ಕುಮ್ಮಕ್ಕು ಇರುತ್ತದೆ. ಇದು ರಾಜ್ಯದ ಮತ್ತು ಹೊರ ರಾಜ್ಯದಲ್ಲಿರುವ ಬಸವ ಪ್ರೇಮಿಗಳಿಗೆ ಮತ್ತು ಲಿಂಗವಂತರಿಗೆ ಅತೀವ ನೋವುಂಟು ಮಾಡಿದೆ.

ಘನತೆ, ಪರಸ್ಪರ ಗೌರವ ಎತ್ತಿ ಹಿಡಿಯುವ ವಾತಾವರಣ ಇರುವುದನ್ನು ಸಹಿಸದ ದುಷ್ಟ ಮನಸುಗಳು, ವ್ಯಕ್ತಿಗಳು ಸಮಾಜದಲ್ಲಿ ಶಾಂತಿಭಂಗ ಉಂಟು ಮಾಡಲು, ಮಾನವ ಪ್ರೀತಿ, ಸಂಬಂಧ ಹಾಳು ಮಾಡಲು ತೊಡಗಿದ್ದಾರೆ. ಅಂತವರಲ್ಲಿ ರವಿ ಹಂಜ್ ಒಬ್ಬರು ಎಂದರು ತಪ್ಪಾಗಲಾರದು. ಇಂಥವರಿಗೆ ಸಾರ್ವಜನಿಕವಾಗಿ ಬಹಿಷ್ಕಾರ ಚಿಮಾರಿ ಹಾಕದಿದ್ದರೆ ಇನ್ನಷ್ಟು ಕೊಳಕು ನುಡಿಗಳು ಮೇಲೇಳುತ್ತವೆ. ಆತನ ಹೇಳಿಕೆ ಸಮಾಜಕ್ಕೆ ಕಂಟಕವಾಗಿದೆ. ಈತನ ಲೇಖನಗಳನ್ನು ಸಂಗ್ರಹಿಸಿ ಹೊರತಂದಿರುವ ಬಸವ ಮಂಟಪ ಕೃತಿಯನ್ನು ಮುಟ್ಟುಗೋಲಾಕಿ ಆತನ ಮೇಲೆ ಸುಮೋಟೋ ಕೇಸ್ ದಾಖಲಿಸಿ ಶಿಕ್ಷೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

— Ningappa

## ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ: ರವಿ ಹಂಜ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಬಸವ ಮಂಟಪ' ಕೃತಿ ಮುಟ್ಟುಗೋಲು ಹಾಕಿ, ಸುಮೋಟೋ ಪ್ರಕರಣ ದಾಖಲಿಸಿ: ಚಂದ್ರಶೇಖರ ನಾಡಗೌಡ ಒತ್ತಾಯ



**ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್**

# ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ: ರವಿ ಹಂಜ್ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹ

### 'ಬಸವ ಮಂಟಪ' ಕೃತಿ ಮುಟ್ಟುಗೋಲು ಹಾಕಿ, ಸುಮೋಟೋ ಪ್ರಕರಣ ದಾಖಲಿಸಿ: ಚಂದ್ರಶೇಖರ ನಾಡಗೌಡ ಒತ್ತಾಯ

**ಜಾಲಹಳ್ಳಿ, ನ. 21:** ಕರ್ನಾಟಕದ ಸಾಂಸ್ಕೃತಿಕ ನಾಯಕ, ಸಮಾನತೆಯ ಹರಿಕಾರ ಜಗಜ್ಯೋತಿ ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎನ್ನಲಾದ ಅನಿವಾಸಿ ಭಾರತೀಯ ಲೇಖಕ ರವಿ ಹಂಜ್ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಪತ್ರಕರ್ತ ಹಾಗೂ ಬಸವ ಸಮಿತಿ ಸಂಚಾಲಕ ಚಂದ್ರಶೇಖರ ನಾಡಗೌಡ ಒತ್ತಾಯಿಸಿದ್ದಾರೆ.

12ನೇ ಶತಮಾನದಲ್ಲಿ ಸಾಮಾಜಿಕ ಸಮಾನತೆ, ಮಾನವೀಯ ಮೌಲ್ಯಗಳು ಹಾಗೂ ಜಾತಿರಹಿತ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸಿದ ಬಸವಣ್ಣನವರ ಕುರಿತು ರವಿ ಹಂಜ್ ನೀಡಿರುವ ಹೇಳಿಕೆಗಳು ಬಸವ ಅನುಯಾಯಿಗಳ ಭಾವನೆಗಳಿಗೆ ನೋವುಂಟು ಮಾಡಿವೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಬಸವಣ್ಣನವರ ವಚನಗಳನ್ನು ಉಲ್ಲೇಖಿಸುವ ನೆಪದಲ್ಲಿ ಅವರ ತತ್ವಾದರ್ಶಗಳನ್ನು ತಪ್ಪಾಗಿ ವ್ಯಾಖ್ಯಾನಿಸಲಾಗಿದೆ. ಬಸವಣ್ಣನವರು ಬಿಜ್ಜಳನ ಬಂಡಾರವನ್ನು ಕದ್ದವರು ಹಾಗೂ ಬಿಜ್ಜಳನ ಹತ್ಯೆಗೆ ಕಾರಣರಾದವರು ಎಂಬ ಅರ್ಥ ಬರುವಂತೆ ಹೇಳಿಕೆ ನೀಡುವ ಮೂಲಕ ಇತಿಹಾಸವನ್ನು ತಿರುಚುವ ಪ್ರಯತ್ನ ಮಾಡಲಾಗಿದೆ. ಇಂತಹ ಹೇಳಿಕೆಗಳು ಬಸವಣ್ಣನವರ ವ್ಯಕ್ತಿತ್ವ ಮತ್ತು ಗೌರವಕ್ಕೆ ಧಕ್ಕೆ ತರುವಂತಿವೆ ಎಂದು ಆರೋಪಿಸಿದರು.

ಬಸವಣ್ಣನವರು ಯಾವುದೇ ಒಂದು ಜಾತಿ ಅಥವಾ ಧರ್ಮಕ್ಕೆ ಸೀಮಿತವಾದವರಲ್ಲ. ಅವರ ಸಮಾನತೆ, ಕಾಯಕ ಮತ್ತು ದಾಸೋಹದ ಸಂದೇಶಗಳು ಇಡೀ ಮಾನವಕುಲಕ್ಕೆ ಮಾರ್ಗದರ್ಶಿಯಾಗಿವೆ. ರಾಜ್ಯ ಸರ್ಕಾರವೇ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿರುವ ಸಂದರ್ಭದಲ್ಲಿ ಅವರ ಕುರಿತು ಅವಹೇಳನಕಾರಿ ಹೇಳಿಕೆ ನೀಡುವುದು ಖಂಡನೀಯ ಎಂದರು.

ಕಳೆದ ಎರಡು ವರ್ಷಗಳಿಂದ ರವಿ ಹಂಜ್ ಅವರು ಬಸವಣ್ಣನವರ ಕುರಿತು ವಿವಾದಾತ್ಮಕ ವಿಷಯಗಳನ್ನು ಒಳಗೊಂಡ ಅಂಕಣಗಳನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದು, ಇದೀಗ ಅವುಗಳನ್ನು 'ಬಸವ ಮಂಟಪ' ಎಂಬ ಕೃತಿಯ ರೂಪದಲ್ಲಿ ಹೊರತಂದಿದ್ದಾರೆ. ಅಲ್ಲದೆ, ಯೂಟ್ಯೂಬ್ ಚಾನೆಲ್‌ನಲ್ಲಿ ಮಾತನಾಡುವ ವೇಳೆ ಲಿಂಗಾಯತ ಸಮುದಾಯವನ್ನು ಅವಹೇಳನಕಾರಿಯಾಗಿ ಸಂಬೋಧಿಸಿ ಸಮುದಾಯದ ಭಾವನೆಗಳಿಗೆ ದಕೆ. ತಂದಿದಾರೆ ಎಂದು ದೂರಿದರು.

ಬದಲಾವಣೆಗೆ ಕಾರಣರಾದ ಮಹಾನ್ ಮಾನವತಾವಾದಿ ಬಸವಣ್ಣನವರ ಕುರಿತು ಯಾರೇ ನಿಂದನೆ ಮಾಡಿದರೂ ಸಹಿಸುವುದಿಲ್ಲ. ಬಸವಣ್ಣನವರ ಸಮಾನತೆ, ಕಾಯಕ ಮತ್ತು ದಾಸೋಹದ ಚಿಂತನೆಗಳು ಈ ಭೂಮಿ ಇರುವವರೆಗೂ ಜೀವಂತವಾಗಿರಲಿವೆ. ಕಾಲ ಬದಲಾಗಬಹುದು, ಆಡಳಿತ ಬದಲಾಗಬಹುದು; ಆದರೆ ಬಸವಣ್ಣನವರ ಮಾನವೀಯತೆ ಮತ್ತು ಸಮಾನತೆಯ ತತ್ವಗಳನ್ನು ಯಾರಿಂದಲೂ ನಾಶಪಡಿಸಲು ಸಾಧ್ಯವಿಲ್ಲ ಎಂದು ಹೇಳಿದರು.

ಶೋಷಣೆಗೆ ಒಳಗಾದ ಮಹಿಳೆಯರಿಗೆ ಲಿಂಗದೀಕ್ಷೆ ನೀಡಿ ವಾಕ್ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಗೌರವದೊಂದಿಗೆ ಬದುಕುವ ಅವಕಾಶ ಕಲ್ಪಿಸುವ ಮೂಲಕ ಮಹಿಳಾ ಸಮಾನತೆಗೆ ಬಸವಣ್ಣನವರು ಮಹತ್ವದ ಕೊಡುಗೆ ನೀಡಿದ್ದಾರೆ. ಸಕಲ ಜೀವಾತ್ಮರಿಗೂ ಲೇಸನ್ನೇ ಬಯಸಿ, ಶೋಷಣೆ ಮತ್ತು ಅಸಮಾನತೆ ಇಲ್ಲದ ಸಮಾಜ ನಿರ್ಮಾಣಕ್ಕಾಗಿ ಹೋರಾಡಿದ ವಿಶ್ವಗುರು ಬಸವಣ್ಣನವರ ಚಾರಿತ್ರ್ಯದ ಕುರಿತು ಕೀಳಾಗಿ ಮಾತನಾಡುವುದು ಸಹಿಸಲಾಗದು ಎಂದರು.

ಐತಿಹಾಸಿಕ ಹಾಗೂ ಸಾಹಿತ್ಯಿಕ ಆಧಾರಗಳಿಲ್ಲದೆ ಸಾಮಾಜಿಕ ಜಾಲತಾಣಗಳಲ್ಲಿ ಬಸವಣ್ಣನವರ ಕುರಿತು ಹೇಳಿಕೆ ನೀಡುವುದು ಖಂಡನೀಯ. ಬಸವಣ್ಣನವರ ಚಾರಿತ್ರ್ಯಕ್ಕೆ ಧಕ್ಕೆ ತರುವುದರ ಜೊತೆಗೆ ವಚನ ಸಾಹಿತ್ಯವನ್ನು ವಿಡಂಬನೆ ಮತ್ತು ವ್ಯಂಗ್ಯಕ್ಕೆ ಗುರಿಪಡಿಸುವ ಉದ್ದೇಶ ಹೊಂದಿರುವಂತೆ ಇಂತಹ ಹೇಳಿಕೆಗಳು ಕಂಡುಬರುತ್ತವೆ ಎಂದು ಆಕ್ಷೇಪಿಸಿದರು.

ಬಸವಣ್ಣನವರ ವಿಚಾರಧಾರೆಗಳನ್ನು ವಿರೂಪಗೊಳಿಸಲು ಹಾಗೂ ಹತ್ತಿಕ್ಕಲು ಪಟ್ಟಭದ್ರ ಹಿತಾಸಕ್ತಿಗಳು ನಿರಂತರ ಪ್ರಯತ್ನ ನಡೆಸುತ್ತಿವೆ. ಇಂತಹ ಬೆಳವಣಿಗೆಗಳು ರಾಜ್ಯ ಹಾಗೂ ಹೊರರಾಜ್ಯಗಳ ಬಸವಪ್ರೇಮಿಗಳು ಮತ್ತು ಲಿಂಗಾಯತ ಸಮುದಾಯದವರಿಗೆ ತೀವ್ರ ನೋವುಂಟು ಮಾಡಿವೆ. ಸಮಾಜದಲ್ಲಿ ಸೌಹಾರ್ದತೆ, ಪ್ರೀತಿ, ಸಮಾನತೆ, ವ್ಯಕ್ತಿತ್ವದ ಘನತೆ ಹಾಗೂ ಪರಸ್ಪರ ಗೌರವಕ್ಕೆ ಧಕ್ಕೆ ತರುವ ಪ್ರಯತ್ನಗಳನ್ನು ಖಂಡಿಸಬೇಕು ಎಂದರು.

ಸಮಾಜದಲ್ಲಿ ಶಾಂತಿಭಂಗ ಉಂಟುಮಾಡುವ ಹಾಗೂ ಮಾನವೀಯ ಸಂಬಂಧಗಳನ್ನು ಹಾಳುಮಾಡುವ ಇಂತಹ ಹೇಳಿಕೆಗಳಿಗೆ ಕಡಿವಾಣ ಹಾಕಬೇಕು. ರವಿ ಹಂಜ್ ಅವರ ಲೇಖನಗಳನ್ನು ಸಂಗ್ರಹಿಸಿ ಪ್ರಕಟಿಸಿರುವ 'ಬಸವ ಮಂಟಪ' ಕೃತಿಯನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಅವರ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಂಡು ಶಿಕ್ಷೆಗೆ ಒಳಪಡಿಸಬೇಕು ಎಂದು ಚಂದ್ರಶೇಖರ ನಾಡಗೌಡ ಆಗ್ರಹಿಸಿದರು.

**ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ**

— Khaja Hussain

## ತೆಲಂಗಾಣಕ್ಕೆ ನೀರು, ಸ್ಥಳೀಯ ರೈತರಿಗೆ ಅನ್ಯಾಯ: ಕೂಡಲೇ ಐಸಿಸಿ ಸಭೆ ಕರೆಯಲು ಶಾಸಕಿ ಕರೆಮ್ಮ ಆಗ್ರಹ ### 28 ಸಾವಿರ ಎಕರೆ ಮೆಣಸಿನ ಬೆಳೆ ಉಳಿಸಲು 1.6 ಟಿಎಂಸಿ ನೀರು ಬಿಡುಗಡೆ ಮಾಡಿ; ಜನವರಿ 15ರವರೆಗೆ ನೀರು ಹರಿಸಲು ಮನವಿ **



**ದೇವದುರ್ಗ ಬ್ರೇಕಿಂಗ್ ನ್ಯೂಸ್**

# ತೆಲಂಗಾಣಕ್ಕೆ ನೀರು, ಸ್ಥಳೀಯ ರೈತರಿಗೆ ಅನ್ಯಾಯ: ಕೂಡಲೇ ಐಸಿಸಿ ಸಭೆ ಕರೆಯಲು ಶಾಸಕಿ ಕರೆಮ್ಮ ಆಗ್ರಹ

### 28 ಸಾವಿರ ಎಕರೆ ಮೆಣಸಿನ ಬೆಳೆ ಉಳಿಸಲು 1.6 ಟಿಎಂಸಿ ನೀರು ಬಿಡುಗಡೆ ಮಾಡಿ; ಜನವರಿ 15ರವರೆಗೆ ನೀರು ಹರಿಸಲು ಮನವಿ

**ದೇವದುರ್ಗ, ನ. 21:** ನೀರಾವರಿ ನಿಗಮದ ಅಧಿಕಾರಿಗಳು ವಿಜಯಪುರ–ಬಾಗಲಕೋಟೆ ಕೆರೆಗಳನ್ನು ತುಂಬಿಸಿ, ತೆಲಂಗಾಣಕ್ಕೆ ಅನಧಿಕೃತವಾಗಿ ನೀರು ಹರಿಸುವ ಮೂಲಕ ದೇವದುರ್ಗ ಹಾಗೂ ಅರಕೇರಾ ಭಾಗದ ರೈತರಿಗೆ ಘೋರ ಅನ್ಯಾಯ ಎಸಗಿದ್ದಾರೆ ಎಂದು ಶಾಸಕಿ ಕರೆಮ್ಮ ಜಿ. ನಾಯಕ ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರೈತರ ಹಿತದೃಷ್ಟಿಯಿಂದ ಸರ್ಕಾರ ಕೂಡಲೇ ನೀರಾವರಿ ಸಲಹಾ ಸಮಿತಿ (ಐಸಿಸಿ) ಸಭೆ ಕರೆದು ಕಾಲುವೆಗಳಿಗೆ ನೀರು ಹರಿಸಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಜಲಾಶಯದಲ್ಲಿ 45 ಟಿಎಂಸಿಗೂ ಅಧಿಕ ನೀರಿದ್ದು, ಕುಡಿಯುವ ನೀರಿಗಾಗಿ 5 ಟಿಎಂಸಿ ಮೀಸಲಿಟ್ಟ ಬಳಿಕ ನಮ್ಮ ಭಾಗಕ್ಕೆ 1.6 ಟಿಎಂಸಿ ನೀರು ಹರಿಸಿದರೆ 28 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದಿರುವ ಮೆಣಸಿನಕಾಯಿ ಬೆಳೆಯನ್ನು ಉಳಿಸಬಹುದು. ಬೆಳೆಗಳ ರಕ್ಷಣೆಗೆ ಇನ್ನೂ ಎರಡು–ಮೂರು ಬಾರಿ ನೀರು ಹರಿಸುವುದು ಅನಿವಾರ್ಯವಾಗಿದೆ ಎಂದು ತಿಳಿಸಿದರು.

ನೀರಾವರಿ ಸಮಸ್

ನಾಮಫಲಕಗಳಲ್ಲಿ ಕನ್ನಡ ಬಳಕೆಯ ಕುರಿತು ಜಿಲ್ಲಾಡಳಿತದ ನಿರಾಸಕ್ತಿಗೆ ಕಟು ಟೀಕೆ ಸಲ್ಲಿಸಿದರು. ಅವರು ಸಮ್ಮೇಳನದಲ್ಲಿ ತೀರ್ಮಾನಗಳ ಅನುಷ್ಠಾನದಲ್ಲಿ ಗಂಭೀರತೆಯ ಕೊರತೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ಸರ್ಕಾರದ ಶಾಲಾ ನೀತಿಗಳು ಹಾಗೂ ಕನ್ನಡ ಶಾಲೆಗಳ ಸ್ಥಿತಿ ಕುರಿತಾಗಿ ಟೀಕೆ ನಡೆಸಿ, ಭಾಲ್ಕಿ ಹಿರೇಮಠ ಹಾಗೂ ಭೀಮಣ್ಣ ಖಂಡ್ರೆ ಅವರ ಹೆಸರಿನಲ್ಲಿ ಪ್ರತಿಷ್ಠಾನ ನಿರ್ಮಾಣಕ್ಕೆ ಒತ್ತಾಯಿಸಿದರು. ಕನ್ನಡ ಭವನ ಪರಿಷತ್ ಆಸ್ತಿಯಾಗಿದ್ದು, ಅದರ ರಕ್ಷಣೆಯ ಅಗತ್ಯವಿದೆ ಎಂದರು.

— Basavaraj pujari

SPORTS

## ಅನಿಕೇತ್ ರಡ್ಡಿ ಕರ್ನಾಟಕ ಅಂಡರ್-19 ಕೂಚ್ ಬೆಹರ್ ಟ್ರೋಫಿಗೆ ಆಯ್ಕೆಯಾದರು



ಬಿಸಿಸಿಐ ಆಯೋಜಿಸಿದ 19 ವರ್ಷದೊಳಗಿನ ಕೂಚ್ ಬೆಹರ್ ಟ್ರೋಫಿಗೆ ಕರ್ನಾಟಕ ತಂಡದಲ್ಲಿ ರಾಯಚೂರು ವಲಯದ ಅನಿಕೇತ್ ರಡ್ಡಿ ಆಯ್ಕೆಯಾದರು.

ಈ ತಂಡವನ್ನು ರಾಹುಲ್ ದ್ರಾವಿಡ್ ಪುತ್ರದ ನಾಯಕತ್ವದಲ್ಲಿ ನಡೆಸಲಾಗುತ್ತಿದೆ; ಪಂದ್ಯಗಳು 26ರಿಂದ 29 ರವರೆಗೆ ಬೆಂಗಳೂರು ನಗರದಲ್ಲಿ ನಡೆಯಲಿವೆ.

KSCA ರಾಯಚೂರು ವಲಯದ ಅಧ್ಯಕ್ಷ ಚಂದ್ರಶೇಖರ ಮೈಲಾರಿ, ಸಂಚಾಲಕ ಕುಶಾಲ ಪಾಟೀಲ್ ಗಾದಗಿ, ಮಾಧ್ಯಮ ಸಂಯೋಜಕ ಅನೀಲಕುಮಾರ ದೇಶಮುಖರು ಅನಿಕೇತ್ ಆಯ್ಕೆಗೆ ಹರ್ಷ ವ್ಯಕ್ತಪಡಿಸಿದರು.

ಅನಿಕೇತ್ ರಡ್ಡಿಯ ಆಯ್ಕೆ ಯುವ ಕ್ರಿಕೆಟ್ ಅಭಿವೃದ್ಧಿಗೆ ಮಹತ್ವದ ಹೆಜ್ಜೆ ಎಂದು ಎಲ್ಲರೂ ಅಭಿಪ್ರಾಯಪಡುತ್ತಾರೆ.

— Basavaraj pujari

POLITICS

## ನಾಡು, ನುಡಿ, ಜಲ ಹಾಗೂ ಗಡಿ ವಿಚಾರದಲ್ಲಿ ಎಲ್ಲಾ ಸಂಘಟನೆಗಳು ಒಗ್ಗಟ್ಟಾಗಿ ಹೋರಾಡಬೇಕು: ಅರುಣಕುಮಾರ ಎಸ್. ಪಾಟೀಲ



ನಾಡು, ನುಡಿ, ಜಲ ಹಾಗೂ ಗಡಿ ವಿಚಾರ ಬಂದಾಗ ನಾಡಿನ ಎಲ್ಲಾ ಸಂಘಟನೆಗಳು ಒಗ್ಗಟ್ಟಾಗಿ ಹೋರಾಟ ಮಾಡಬೇಕು ಎಂದು ಜೈ ಕ್ನಾಟಕ ರಕ್ಷಣಾ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಅರುಣಕುಮಾರ ಎಸ್. ಪಾಟೀಲ ಹೇಳಿದರು. ಬೀದರ್‌ನ ಚನ್ನಬಸವ ಪಟ್ಟದೇವರು ರಂಗಮಂದಿರದಲ್ಲಿ ಜೈ ಕ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ 71ನೇ ಕ್ನಾಟಕ ರಾಜ್ಯೋತ್ಸವ ಜಿಲ್ಲಾ ಮಟ್ಟದ ಯುವ ಸಮಾವೇಶ, ವಿವಿಧ ಕ್ಷೇತ್ರಗಳ ಸಾಧಕರಿಗೆ ಕ್ನಾಟಕ ಜನಸೇವಾ ರತ್ನ ಪ್ರಶಸ್ತಿ ಪ್ರದಾನ ಹಾಗೂ ಚಿತ್ರಕಲೆ, ಪ್ರಬಂಧ ಸ್ಪೆ್ಧಯಲ್ಲಿ ವಿಜೇತರಾದ ವಿದ್ಯಾರ್ಥಿಗಳ ಸನ್ಮಾನ ಸಮಾರಂಭವನ್ನು ಅವರು ಉದ್ಘಾಟಿಸಿ ಮಾತನಾಡಿದರು.

12ನೇ ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ವಿಶ್ವಕ್ಕೆ ಸಮಾನತೆ, ಸ್ವಾಭಿಮಾನ ಹಾಗೂ ಮಾನವೀಯ ಮೌಲ್ಯಗಳನ್ನು ಸಾರಿದ ಬಸವಣ್ಣನವರ ನಾಡು ಬೀದರ್ ಎಂದು ಹೇಳಿದ ಅವರು, ಇಂತಹ ನೆಲದಲ್ಲಿ ಸಕ್ಕರೆ ಕಾರ್ಖಾನೆಗಳು ಆರಂಭವಾಗುತ್ತಿರುವುದು ಸಂತಸದ ವಿಚಾರ ಎಂದು ತಿಳಿಸಿದರು. ಬೆಳೆ ನಾಶದಿಂದ ಸಂಕಷ್ಟದಲ್ಲಿರುವ ರೈತರಿಗೆ ಶೀಘ್ರ ಪರಿಹಾರ ನೀಡುವಂತೆ ಸಂಘಟನೆ ಮೂಲಕ ಕ್ಕಾರವನ್ನು ಆಗ್ರಹಿಸಲಾಗುವುದು. ನಾಡಿನಲ್ಲಿ ಹುಟ್ಟಿದ ಪ್ರತಿಯೊಂದು ಸಂಘಟನೆಯೂ ನಾಡಿನ ಹಿತ ರಕ್ಷಣೆಗೆ ಶ್ರಮಿಸಬೇಕು. ಅನ್ಯಾಯದ ವಿರುದ್ಧ ಎಲ್ಲರೂ ಒಂದಾಗಿ ಹೋರಾಡಬೇಕು ಎಂದು ಕರೆ ನೀಡಿದರು.

ಸಚಿವ ಬಂಡೆಪ್ಪ ಖಾಶೆಂಪೂರ ಮಾತನಾಡಿ, ಬೀದರ್ ಜಿಲ್ಲೆ ವಿಶಿಷ್ಟವಾದ ನೆಲವಾಗಿದೆ. ಇಲ್ಲಿ ಪಂಚಭಾಷೆ ಮಾತನಾಡುವ ಜನರಿದ್ದರೂ ಕನ್ನಡ ಭಾಷೆಯ ಮೇಲಿನ ಪ್ರೀತಿ ಮತ್ತು ಅಭಿಮಾನ ಕಡಿಮೆಯಾಗಿಲ್ಲ ಎಂದು ತಿಳಿಸಿದರು. ಜೈ ಕ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಮಂಜುನಾಥ ಬಿ. ಹಾಗರಗಿ, ಕಾನೂನು ಸಲಹೆಗಾರ ಶಂಭುಲಿಂಗ ದಬ್ಬಾಸಾನೋರ, ಜಿಲ್ಲಾಧ್ಯಕ್ಷ ರಮೇಶ ರ್ಜಾಪೂರ, ಗೌರವಾಧ್ಯಕ್ಷ ಸೈಯದ್ ನವಾಜ್ ಚಿಟ್ಟಾ, ಉಪಾಧ್ಯಕ್ಷ ಮೊಹಸಿನ್ ಪಟೇಲ್ ಖಾಶೆಂಪೂರ ಸೇರಿದಂತೆ ಹಲವರು ಮಾತನಾಡಿ, ಜಿಲ್ಲೆಯಲ್ಲಿ ಸಮಾಜ ಸೇವೆ ಹಾಗೂ ಜನಪರ ಕರ್ಯಗಳಿಗೆ ಸಂಘಟನೆ ಬದ್ಧವಾಗಿದೆ ಎಂದರು.

ಸಮಾರಂಭದಲ್ಲಿ ಸಾಹಿತ್ಯ, ಸಾಂಸ್ಕೃತಿಕ, ರ್ಕಾರಿ ಸೇವೆ, ಕೃಷಿ, ಸಮಾಜ ಸೇವೆ, ಮಾಧ್ಯಮ, ಕ್ರೀಡೆ, ವೈದ್ಯಕೀಯ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಲವು ಗಣ್ಯರಿಗೆ ಕ್ನಾಟಕ ಜನಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಬಂಧ ಸ್ಪೆ್ಧಯಲ್ಲಿ ಲಾವಣ್ಯ, ಕಲ್ಪನಾ, ಅಭಿಷೇಕ್ ಹಾಗೂ ಚಿತ್ರಕಲೆ ಸ್ಪೆ್ಧಯಲ್ಲಿ ಅನುನ್ಯ, ಮರಿಯಂ ಗೌಸಿಯಾ, ರತ್ನಜ್ಯೋತಿ ವಿಜೇತರಾಗಿ ಪ್ರೋತ್ಸಾಹಧನ ಹಾಗೂ ಸನ್ಮಾನ ಪತ್ರ ಪಡೆದರು. ಜೈ ಕರವೇ ಜಿಲ್ಲಾ ಪ್ರಧಾನ ಕರ್ಯರ್ಶಿ ರುಕ್ಮಾನ್ ಚಿದ್ರಿ ಸ್ವಾಗತಿಸಿದರೆ, ಜಿಲ್ಲಾ ಸಂಯೋಜಕ ಶಿವರಾಜ ನೆಳವಾಳಕರ್ ಪ್ರಾಸ್ತಾವಿಕ ಮಾತನಾಡಿದರು. ಸದ್ಗುರು ಸಿದ್ಧಾರೂಢ ಮಹಿಳಾ ಪದವಿ ಮಹಾವಿದ್ಯಾಲಯದ ಪ್ರಾಚರ್ಯ ನಾಗಪ್ಪ ಜಾನಕನೋರ ನಿರೂಪಿಸಿದರು. ಜಿಲ್ಲಾ ಕರ್ಯಾಧ್ಯಕ್ಷ ಶಾಮವೇಲ್ ಸಾಜನ್ ವಂದಿಸಿದರು. ಸಮಾರೋಪ ಸಮಾರಂಭದಲ್ಲಿ ಹವಾಮಲ್ಲಿನಾಥ ಸ್ವಾಮೀಜಿ ಕರ್ಯರ್ತರನ್ನು ಸನ್ಮಾನಿಸಿದರು. ಶಿವದಾಸ ಸ್ವಾಮಿ, ಶಿವಕುಮಾರ ಸ್ವಾಮಿ, ನಾಗೇಶ ಸ್ವಾಮಿ ಅವರ ಗಾಯನ ಕರ್ಯಕ್ರಮಕ್ಕೆ ಮೆರುಗು ನೀಡಿತು.

— Basavaraj pujari

## ಕಿತ್ತೂರು ರಾಣಿ ಚನ್ನಮ್ಮ ವಿಜಯೋತ್ಸವಕ್ಕೆ ಶ್ರೀಗಳ ಚಾಲನೆ



ಸವಣೂರು: ಸವಣೂರಿನ ದೊಡ್ಡಹುಣಸೆಮರದ ಮಠದಲ್ಲಿ ಆಯೋಜಿಸಲಾಗಿದ್ದ ವೀರರಾಣಿ ಕಿತ್ತೂರು ಚನ್ನಮ್ಮಾಜಿಯವರ ವಿಜಯೋತ್ಸವ ಸಮಾರಂಭವನ್ನು ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳು ಹಾಗೂ ಶ್ರೀ ಚನ್ನಬಸವ ಮಹಾಸ್ವಾಮಿಗಳು ದೀಪ ಬೆಳಗಿಸುವ ಮೂಲಕ ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗಣ್ಯರು ವೀರರಾಣಿ ಕಿತ್ತೂರು ಚನ್ನಮ್ಮಾಜಿಯವರ ಧೈರ್ಯ, ಸಾಹಸ, ದೇಶಪ್ರೇಮ ಹಾಗೂ ಬ್ರಿಟಿಷರ ವಿರುದ್ಧದ ಹೋರಾಟದ ಆದರ್ಶಗಳನ್ನು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಅಧ್ಯಕ್ಷರಾದ ಬಿ.ಎಂ. ಪಾಟೀಲ, ವಕೀಲರಾದ ಎಸ್.ವಿ. ಪಾಟೀಲ, ನಿವೃತ್ತ ಸೈನಿಕರು, ಸಮುದಾಯದ ಹಿರಿಯರು, ತಾಯಂದಿರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

— Viswanatha D R

## ನ.25ರಂದು ರಾಯಚೂರು ಜಿಲ್ಲಾದ್ಯಂತ ಬೃಹತ್ ರಕ್ತದಾನ ಶಿಬಿರ - 5 ಸಾವಿರ ಯುನಿಟ್ ರಕ್ತ ಸಂಗ್ರಹ ಗುರಿ - ಡಾ. ನಂದಿತಾ ಎಂ.ಎನ್ ಕರೆ - ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ 6 ಕೇಂದ್ರಗಳಲ್ಲಿ ಶಿಬಿರ



ನ.25ರಂದು ರಾಯಚೂರು ಜಿಲ್ಲಾದ್ಯಂತ ಬೃಹತ್ ರಕ್ತದಾನ ಶಿಬಿರ - 5 ಸಾವಿರ ಯುನಿಟ್ ರಕ್ತ ಸಂಗ್ರಹ ಗುರಿ

25ರಂದು ಬೃಹತ್ ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ಆಯೋಜಿಸಲಾಗಿದ್ದು, ಒಂದೇ ದಿನ 5 ಸಾವಿರ ಯುನಿಟ್ ರಕ್ತ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಯುವಕರು, ಕಾಲೇಜು ವಿದ್ಯಾರ್ಥಿಗಳು, ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಮಹತ್ಕಾರ್ಯಕ್ಕೆ ಕೈಜೋಡಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಂದಿತಾ ಎಂ.ಎನ್. ಮನವಿ ಮಾಡಿದ್ದಾರೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕರ್ನಾಟಕ ಏಡ್ಸ್ ಪ್ರಿವೆನ್ಷನ್ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿಮ್ಸ್), ಜಿಲ್ಲೆಯ ರಕ್ತನಿಧಿ ಕೇಂದ್ರಗಳು, ರೆಡ್ ರಿಬ್ಬನ್ ಕ್ಲಬ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಜನಪ್ರತಿನಿಧಿಗಳ ಮಾರ್ಗದರ್ಶನದೊಂದಿಗೆ ರಕ್ತದಾನ ಶಿಬಿರಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಅಪಘಾತಗಳಲ್ಲಿ ಗಂಭೀರವಾಗಿ ಗಾಯಗೊಂಡವರು, ಹೆರಿಗೆ ಸಂದರ್ಭದಲ್ಲಿ ಅಧಿಕ ರಕ್ತಸ್ರಾವಕ್ಕೆ ಒಳಗಾಗುವ ಮಹಿಳೆಯರು, ತೀವ್ರ ರಕ್ತಹೀನತೆಯಿಂದ ಬಳಲುವವರು, ಥಲಸ್ಸೀಮಿಯಾ ಹಾಗೂ ರಕ್ತ ಕ್ಯಾನ್ಸರ್‌ನಂತಹ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಸಕಾಲದಲ್ಲಿ ರಕ್ತ ದೊರೆಯುವುದು ಅತ್ಯಂತ ಅಗತ್ಯವಾಗಿದೆ. ಇಂತಹ ತುರ್ತು ಸಂದರ್ಭಗಳಲ್ಲಿ ಸ್ವಯಂಪ್ರೇರಿತ ರಕ್ತದಾನಿಗಳ ಸೇವೆ ಅನೇಕ ಜೀವಗಳನ್ನು ಉಳಿಸಲು ನೆರವಾಗುತ್ತದೆ ಎಂದು ಹೇಳಿದ್ದಾರೆ.

ನವೆಂಬರ್ 25ರಂದು ರಾಯಚೂರು ನಗರದ ಹಳೆಯ ಜಿಲ್ಲಾಧಿಕಾರಿ ಕಚೇರಿ ಸಮೀಪದ ವೀರಶೈವ ಕಲ್ಯಾಣ ಮಂಟಪ, ದೇವದುರ್ಗದ ಜಾಲಹಳ್ಳಿ ರಸ್ತೆಯಲ್ಲಿರುವ ದೇವದುರ್ಗ ರಕ್ತನಿಧಿ ಕೇಂದ್ರ, ಸಿಂಧನೂರಿನ ಜನತಾ ಕಾಲೋನಿಯ ಶಾದಿ ಮಹಲ್ ಹಾಗೂ ಸಂಕೇತ ಪದವಿ ಕಾಲೇಜು, ಲಿಂಗಸುಗೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಹಟ್ಟಿಯ ಚಿನ್ನದ ಗಣಿ ಆಸ್ಪತ್ರೆ ಆವರಣದಲ್ಲಿ ರಕ್ತದಾನ ಶಿಬಿರಗಳು ನಡೆಯಲಿವೆ.

ಎಲ್ಲ ಕೇಂದ್ರಗಳಲ್ಲಿಯೂ ಬೆಳಿಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸ್ವಯಂಪ್ರೇರಿತ ರಕ್ತದಾನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಾರ್ವಜನಿಕರು ತಮ್ಮ ಸಮೀಪದ ಶಿಬಿರಗಳಿಗೆ ತೆರಳಿ ರಕ್ತದಾನ ಮಾಡುವಂತೆ ಡಾ. ನಂದಿತಾ ಮನವಿ ಮಾಡಿದ್ದಾರೆ.

ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ಆದ್ದರಿಂದ ತುರ್ತು ಚಿಕಿತ್ಸೆಗೆ ಅಗತ್ಯವಿರುವ ರಕ್ತಕ್ಕಾಗಿ ಸ್ವಯಂಪ್ರೇರಿತ ದಾನಿಗಳನ್ನೇ ಅವಲಂಬಿಸಬೇಕಾಗಿದೆ. 'ಮಾನವೀಯತೆಯ ಒಂದು ಹನಿ ರಕ್ತ ನೀಡಿ, ಜೀವ ಉಳಿಸಿ' ಎಂಬ ಸಂದೇಶದೊಂದಿಗೆ ರಕ್ತದಾನದ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಆರೋಗ್ಯವಂತ 18ರಿಂದ 65 ವರ್ಷದೊಳಗಿನ ವ್ಯಕ್ತಿಗಳು ವೈದ್ಯಕೀಯ ಅರ್ಹತಾ ತಪಾಸಣೆಗೆ ಒಳಪಟ್ಟು ರಕ್ತದಾನ ಮಾಡಬಹುದು. ರಕ್ತದಾನಿಯ ತೂಕ, ಹಿಮೋಗ್ಲೋಬಿನ್ ಪ್ರಮಾಣ, ರಕ್ತದೊತ್ತಡ ಹಾಗೂ ಆರೋಗ್ಯ ಸ್ಥಿತಿಯನ್ನು ಪರಿಶೀಲಿಸಿದ ಬಳಿಕ ರಕ್ತದಾನಕ್ಕೆ ಅವಕಾಶ ನೀಡಲಾಗುತ್ತದೆ. ಗಂಭೀರ ಆರೋಗ್ಯ ಸಮಸ್ಯೆಗಳಿರುವವರು ವೈದ್ಯಕೀಯ ಸಿಬ್ಬಂದಿಯ ಸಲಹೆ ಪಡೆಯಬೇಕು ಎಂದು ಹೇಳಿದ್ದಾರೆ.

ದಾನ ಮಾಡಿದ ರಕ್ತವನ್ನು ಕೆಂಪು ರಕ್ತಕಣಗಳು, ಪ್ಲೇಟ್‌ಲೆಟ್‌ಗಳು ಹಾಗೂ ಪ್ಲಾಸ್ಮಾ ಎಂಬ ಘಟಕಗಳಾಗಿ ಬೇರ್ಪಡಿಸಿ ಅಗತ್ಯವಿರುವ ವಿವಿಧ ರೋಗಿಗಳ ಚಿಕಿತ್ಸೆಗೆ ಬಳಸಬಹುದು. ಕೆಂಪು ರಕ್ತಕಣಗಳನ್ನು ತೀವ್ರ ರಕ್ತಹೀನತೆ, ಅಪಘಾತ ಹಾಗೂ ಹೆರಿಗೆ ಸಂದರ್ಭದ ರಕ್ತಸ್ರಾವದ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ. ಪ್ಲೇಟ್‌ಲೆಟ್‌ಗಳು ಡೆಂಗ್ಯೂ, ಕ್ಯಾನ್ಸರ್ ಹಾಗೂ ಕೀಮೋಥೆರಪಿ ಚಿಕಿತ್ಸೆಯ ಕೆಲವು ಸಂದರ್ಭಗಳಲ್ಲಿ ಅಗತ್ಯವಾಗುತ್ತವೆ. ಪ್ಲಾಸ್ಮಾವನ್ನು ರಕ್ತ ಹೆಪ್ಪುಗಟ್ಟುವಿಕೆಯ ಸಮಸ್ಯೆಗಳು ಸೇರಿದಂತೆ ನಿರ್ದಿಷ್ಟ ವೈದ್ಯಕೀಯ ಪರಿಸ್ಥಿತಿಗಳಲ್ಲಿ ಬಳಸಲಾಗುತ್ತದೆ.

ಮೂವರು ರೋಗಿಗಳಿಗೆ ನೆರವಾಗುವ ಸಾಧ್ಯತೆಯಿದೆ. ರಕ್ತದಾನವು ಕೇವಲ ವೈದ್ಯಕೀಯ ಪ್ರಕ್ರಿಯೆಯಲ್ಲ, ಮಾನವೀಯತೆ, ಸಹಾನುಭೂತಿ ಹಾಗೂ ಸಾಮಾಜಿಕ ಜವಾಬ್ದಾರಿಯ ಪ್ರತೀಕವಾಗಿದೆ. ಆರೋಗ್ಯವಂತ ನಾಗರಿಕರು ಸ್ವಯಂಪ್ರೇರಣೆಯಿಂದ ರಕ್ತದಾನ ಮಾಡುವ ಮೂಲಕ ರಕ್ತದ ಕೊರತೆಯನ್ನು ನೀಗಿಸಲು ಸಹಕರಿಸಬೇಕು ಎಂದು ಡಾ. ನಂದಿತಾ ಎಂ.ಎನ್. ಕರೆ ನೀಡಿದ್ದಾರೆ.

— Ningappa

## ರವಿ ಹಂಜಿ ಮತ್ತು ವಿಶ್ವವಾಣಿ ಪತ್ರಿಕೆ ಸಂಪಾದಕ ವಿಶ್ವೇಶ್ವರ ಭಟ್ ವಿರುದ್ಧ ರಾಯಚೂರು ಬಸವೇಶ್ವರ ಪುತ್ಥಳಿ ಆವರಣದಲ್ಲಿ ಪ್ರತಿಭಟನೆ



ರಾಯಚೂರು: ಬಸವಣ್ಣ ಅವಮಾನ ಮಾಡಿರುವ ರವಿ ಹಂಜಿ ಮತ್ತು ವಿಶ್ವವಾಣಿ ಪತ್ರಿಕೆ ಸಂಪಾದಕರು ಆದ ವಿಶ್ವೇಶ್ವರ ಭಟ್ ವಿರುದ್ಧ ಇಂದು ರಾಯಚೂರು ಬಸವೇಶ್ವರ ಪುತ್ಥಳಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಶಾಸಕರಾದ ಶಿವರಾಜ ಪಾಟೀಲ್ ಹಾಗೂ ಬಸವಾಭಿಮಾನಿಗಳು ಹಾಜರಿದ್ದರು.

— Ningappa

## ಕರ್ನಾಟಕದಲ್ಲಿ ನಿಗಮ-ಮಂಡಳಿ ಅಧ್ಯಕ್ಷರ ನೇಮಕಕ್ಕೆ ಹೈಕಮಾಂಡ್ ಅಸ್ತು - ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಹೊಸ ಜವಾಬ್ದಾರಿ - 18 ನಿಗಮ-ಮಂಡಳಿಗಳಿಗೆ ಅಧ್ಯಕ್ಷರ ನೇಮಕ - ಕೆ.ಸಿ. ವೇಣುಗೋಪಾಲ್ ಆದೇಶ




ಕರ್ನಾಟಕದಲ್ಲಿ ನಿಗಮ-ಮಂಡಳಿ ಅಧ್ಯಕ್ಷರ ನೇಮಕಕ್ಕೆ ಹೈಕಮಾಂಡ್ ಅಸ್ತು - ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ಹೊಸ ಜವಾಬ್ದಾರಿ

ಬೆಂಗಳೂರು: ರಾಜ್ಯದ ವಿವಿಧ ನಿಗಮ, ಮಂಡಳಿ ಹಾಗೂ ಪ್ರಮುಖ ಹುದ್ದೆಗಳಿಗೆ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ನೇಮಕಕ್ಕೆ ಕಾಂಗ್ರೆಸ್ ಹೈಕಮಾಂಡ್ ಒಪ್ಪಿಗೆ ನೀಡಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ನೇಮಕಾತಿ ಆದೇಶ ಹೊರಡಿಸಿದ್ದು, ಈ ಸಂಬಂಧ ಮುಖ್ಯಮಂತ್ರಿಗಳಿಗೆ ಅಧಿಕೃತ ಪತ್ರ ರವಾನಿಸಿದ್ದಾರೆ.

ನೇಮಕಗೊಂಡವರ ಪಟ್ಟಿ ಹೀಗಿದೆ:

1. ಬಿ. ಶಿವಣ್ಣ - ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಅಧ್ಯಕ್ಷರು.

2. ಕೆ. ಷಡಕ್ಷರಿ - ಕರ್ನಾಟಕ ರಾಜ್ಯ ಖನಿಜ ನಿಗಮ (KSMCL) ಅಧ್ಯಕ್ಷರು.

3. ಪಿ.ಎಂ. ಅಶೋಕ್ - ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಅಧ್ಯಕ್ಷರು.

4. ಎ.ಆರ್. ಕೃಷ್ಣಮೂರ್ತಿ - ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (BMTC) ಅಧ್ಯಕ್ಷರು.

5. ಹಂಪನಗೌಡ ಬಾದರ್ಲಿ - ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಅಧ್ಯಕ್ಷರು.

6. ಡಿ.ಜಿ. ಶಾಂತನ ಗೌಡ - ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (BSWML) ಅಧ್ಯಕ್ಷರು.

7. ಜಿ.ಎಚ್. ಶ್ರೀನಿವಾಸ್ - ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ಅಧ್ಯಕ್ಷರು.

8. ಮಹಾಂತೇಶ್ ಕೌಜಲಗಿ - ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ಅಧ್ಯಕ್ಷರು.

9. ಎಸ್.ಎನ್. ಸುಬ್ಬಾರೆಡ್ಡಿ - ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (MSIL) ಅಧ್ಯಕ್ಷರು.

ವಿಧಾನಸಭೆಯ ಸರ್ಕಾರದ ಮುಖ್ಯ ಸಚೇತಕರು.

11. ತನ್ವೀರ್ ಸೇಠ್ - ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ.

12. ಎನ್.ಎಚ್. ಕೋನರೆಡ್ಡಿ - ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರು.

13. ಬಸನಗೌಡ ದದ್ದಲ್ - ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ (KKRDB) ಅಧ್ಯಕ್ಷರು.

14. ಮಂಜುನಾಥ್ ಭಂಡಾರಿ - ವಿಧಾನ ಪರಿಷತ್ತಿನ ಮುಖ್ಯ ಸಚೇತಕರು.

15. ಅಲ್ಲಂಪ್ರಭು ಪಾಟೀಲ್ - ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ (KSSIDC) ಅಧ್ಯಕ್ಷರು.

16. ಶ್ಯಾಮ್ ನಟೇಕರ್ - ಕರ್ನಾಟಕ ಸಾಂಬಾರ ಪದಾರ್ಥಗಳ ಅಭಿವೃದ್ಧಿ ಮಂಡಳಿ ಅಧ್ಯಕ್ಷರು.

17. ಎಚ್.ಸಿ. ಲಲಿತ್ ರಾಘವ್ - ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ (KAVIKA) ಅಧ್ಯಕ್ಷರು.

18. ಸುಭಾಷ್ ರಾಥೋಡ್ - ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷರು.

ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ನಿಗಮ-ಮಂಡಳಿ ಸ್ಥ

ಖಾಜಾ ಹುಸೇನ್ ಬಾಬಾ, ಕರ್ನಾಟಕದಲ್ಲಿ ಕನ್ನಡಿಗರೇ ಸಾರ್ವಭೌಮರು. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಮೊದಲ ಆದ್ಯತೆ ನೀಡಬೇಕು. ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು ಸೇರಿದಂತೆ ಎಲ್ಲ ಇಲಾಖೆಗಳಲ್ಲೂ ಕನ್ನಡ ನಾಮಫಲಕಗಳನ್ನು ಅಳವಡಿಸಬೇಕು. ಬ್ಯಾಂಕ್‌ಗಳಲ್ಲಿ ಕನ್ನಡದಲ್ಲಿಯೇ ವ್ಯವಹಾರ ನಡೆಸಲು ಆದ್ಯತೆ ನೀಡಬೇಕು. ಸರ್ಕಾರಿ ಕಚೇರಿಗಳಿಗೆ ಸಲ್ಲಿಸುವ ಮನವಿ ಪತ್ರಗಳನ್ನು ಕನ್ನಡದಲ್ಲಿಯೇ ಬರೆಯಬೇಕು ಎಂದು ಕರೆ ನೀಡಿದರು.

ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯ ದಿನಾಚರಣೆಯ ನಂತರ ಕರ್ನಾಟಕದಲ್ಲಿ ಅತ್ಯಂತ ಪ್ರಮುಖವಾಗಿ ಆಚರಿಸುವ ಹಬ್ಬ ಕನ್ನಡ ರಾಜ್ಯೋತ್ಸವವಾಗಿದೆ. ಕನ್ನಡ ಭಾಷೆ, ನೆಲ, ಜಲ ಹಾಗೂ ಸಂಸ್ಕೃತಿಯ ರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ನಂದಪ್ಪ ಮಡ್ಡಿ ಅವರು ಕನ್ನಡ ಭಾಷೆಯ ಉಳಿವು ಹಾಗೂ ಬೆಳವಣಿಗೆಯ ಕುರಿತು ಮಾತನಾಡಿ, ಕನ್ನಡಿಗರಲ್ಲಿ ಭಾಷಾಭಿಮಾನ ಮತ್ತು ನಾಡಿನ ಬಗ್ಗೆ ಗೌರವ ಹೆಚ್ಚಾಗಬೇಕು ಎಂದರು. ವೇದಿಕೆಯ ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಎಂ. ಅವರು ಕನ್ನಡ ಭಾಷೆ ಹಾಗೂ ಕನ್ನಡ ನಾಡಿನ ರಕ್ಷಣೆಯ ಕುರಿತು ಮಾತನಾಡಿದರು.

ಅಂಗವೈಕಲ್ಯ ಹೊಂದಿದ್ದರೂ ಕನ್ನಡ ರಾಜ್ಯೋತ್ಸವದಂತಹ ಕಾರ್ಯಕ್ರಮವನ್ನು ಉತ್ಸಾಹದಿಂದ ಆಯೋಜಿಸಿದ ಯರಗುಡ್ಡ ಗ್ರಾಮದ ಕರವೇ ಮುಖಂಡ ಶಿವಪ್ಪ ಕರಡಿ ಅವರ ಕಾರ್ಯ ಜನರ ಮೆಚ್ಚುಗೆಗೆ ಪಾತ್ರವಾಯಿತು.

ಕಾರ್ಯಕ್ರಮದಲ್ಲಿ ಕರವೇ ತಾಲೂಕು ಅಧ್ಯಕ್ಷ ನಂದಪ್ಪ ಮಡ್ಡಿ, ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಎಂ., ತಾಲೂಕು ಸಂಚಾಲಕ ಭೀಮಣ್ಣ ನಾಯಕ, ಜಾಲಹಳ್ಳಿ ಹೋಬಳಿ ಕರವೇ ಅಧ್ಯಕ್ಷ ತಮ್ಮಣ್ಣ ಹೆರುಂಡಿ, ಹೋಬಳಿ ಪ್ರಧಾನ ಕಾರ್ಯದರ್ಶಿ ಬಸವ ಹೆರುಂಡಿ, ಹೋಬಳಿ ಉಪಾಧ್ಯಕ್ಷ ಅರಮೇಶ್ ಪಾಟೀಲ್, ಗ್ರಾಮ ಉಪಾಧ್ಯಕ್ಷ ವೆಂಕಟೇಶ್, ಶಂಕರಗೌಡ ಮಾಲಿ ಪಾಟೀಲ್, ರಂಗಪ್ಪ ಬಂಡಿ, ಮಲ್ಲು ಕರವೇ, ಲಿಂಗಣ್ಣ ಮಕಾಶಿ, ಯುವ ಘಟಕದ ಅಧ್ಯಕ್ಷ ಮಲ್ಲು ತೆಗ್ಗೆಳ್ಳಿ, ಹುಲಿಗೆಪ್ಪ ಪೊಲೀಸ್ ಪಾಟೀಲ್, ಶಿವಪ್ಪ ಕರಡಿ, ಚಿರಂಜೀವಿ, ದೇವೇಗೌಡ ಪೊಲೀಸ್ ಪಾಟೀಲ್, ನಾರಾಯಣ ಪಾಟೀಲ್, ದೇವೇಗೌಡ ಕರಡಿ, ವೆಂಕಟೇಶ್ ಪಾಟೀಲ್, ಶಿವರಾಜ್ ಮಾಲಿ ಪಾಟೀಲ್, ದೇವರಾಜ್ ಶಿಕ್ಷಕರು, ಮಾನಪ್ಪ ಗಂಟಿ, ಭೀಮಣ್ಣ ಪೊಲೀಸ್ ಪಾಟೀಲ್, ಚಂದ್ರಪ್ಪ ಕರಡಿ, ಶಿವರಾಜ್ ಪಾಟೀಲ್, ನಾಗರಾಜ್ ಸೇರಿದಂತೆ ಯರಗುಡ್ಡ ಶಾಲೆಯ ವಿದ್ಯಾರ್ಥಿಗಳು, ಗ್ರಾಮಸ್ಥರು ಹಾಗೂ ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

**ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ**

— Khaja Hussain

NATIONAL

## ಅಂದು ಮೋದಿಜಿ ಅವರ ಸರಳತೆ ಮತ್ತು ತ್ಯಾಗದ ಆದರ್ಶ, ಇಂದು ಯೋಗಿಜೀ ಅವರ ಮಾತೃಭಕ್ತಿಯ ಆದರ್ಶ. ಅಧಿಕಾರ, ಹುದ್ದೆ, ಜನಪ್ರಿಯತೆ ಎಲ್ಲವನ್ನೂ ಮೀರಿ ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ನಾಯಕರು ಇವರು.



ಅಂದು ಮೋದಿಜಿ ಅವರ ಸರಳತೆ ಮತ್ತು ತ್ಯಾಗದ ಆದರ್ಶ, ಇಂದು ಯೋಗಿಜೀ ಅವರ ಮಾತೃಭಕ್ತಿಯ ಆದರ್ಶ. ಅಧಿಕಾರ, ಹುದ್ದೆ, ಜನಪ್ರಿಯತೆ ಎಲ್ಲವನ್ನೂ ಮೀರಿ ಮಾನವೀಯ ಮೌಲ್ಯಗಳಿಗೆ ಬೆಲೆ ಕೊಡುವ ನಾಯಕರು ಇವರು.

ದೇಶದ ಅತ್ಯುನ್ನತ ಜವಾಬ್ದಾರಿಯಲ್ಲಿದ್ದರೂ ಕುಟುಂಬದ ವಿಚಾರದಲ್ಲಿ ಆಡಂಬರವಿಲ್ಲದ ಸರಳತೆ, ಸಂಸ್ಕಾರ ಮತ್ತು ಕರ್ತವ್ಯಪ್ರಜ್ಞೆ ನಿಜಕ್ಕೂ ಮಾದರಿ.

ನಾಯಕತ್ವವೆಂದರೆ ಕೇವಲ ಅಧಿಕಾರವಲ್ಲ, ಬದುಕಿನ ಮೂಲಕ ಆದರ್ಶವನ್ನು ತೋರಿಸುವುದು.

ಅಂದು ಮೋದಿಜಿ, ಇಂದು ಯೋಗಿಜೀ.

— ಕೆ ಆರ್ ಸುರೇಶ್

RELIGION

## ತುಮಕೂರು ನೀರಕಲ್ಲು ಶ್ರೀ ಲಕ್ಷ್ಮಿ ದೇವಿ ದೇವಸ್ಥಾನದಲ್ಲಿ ಕಾರ್ತಿಕ ದೀಪೋತ್ಸವ



ತುಮಕೂರಿನ ನೀರಕಲ್ಲು ಶ್ರೀ ಲಕ್ಷ್ಮಿ ದೇವಿ ದೇವಸ್ಥಾನದ ಆವರಣದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಭವ್ಯ ದೀಪೋತ್ಸವ ಆಯೋಜಿಸಲಾಯಿತು.

ಪವಿತ್ರ ಅರಳಿ ಮರದ ಸುತ್ತ ನೂರಾರು ಮಣ್ಣಿನ ದೀಪಗಳನ್ನು ಬೆಳಗಿಸಿ, ಹೂವಿನ ಮಾಲೆ ಹಾಕಿ ವಿಶೇಷ ಪೂಜೆ ಸಲ್ಲಿಸಲಾಯಿತು. ದೀಪದ ಬೆಳಕಿನಲ್ಲಿ ದೇವಸ್ಥಾನ ಸ್ವರ್ಗದಂತೆ ಕಂಗೊಳಿಸಿತು.

ಹಳದಿ ಸೇವಂತಿಗೆ, ಬಿಳಿ ಮಲ್ಲಿಗೆ, ಕೇಸರಿ ಹೂವಿನ ಮಾಲೆಗಳಿಂದ ದೇವಿಯನ್ನ ಅಲಂಕರಿಸಲಾಯಿತು. ಬಾಳೆಹಣ್ಣು, ಹೂವು, ಕುಂಕುಮದಿಂದ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿ ನೆರವೇರಿಸಲಾಯಿತು.

ನೂರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಜೊತೆಗೆ ಜಾತ್ರಾ ಮಹೋತ್ಸವದಲ್ಲಿ ಹೂವಿನ ಬಸವನ ನೃತ್ಯ ಪ್ರದರ್ಶನವೂ ನಡೆಯಿತು, ಯುವಕನು ಬೃಹತ್ ಹೂವಿನ ಛತ್ರಿಯನ್ನು ಹೊತ್ತು ಕುಣಿದು, ಗ್ರಾಮಸ್ಥರು ತಮಟೆ, ಡೋಲು ವಾದ್ಯದ ಸದ್ದಿಗೆ ಕುಣಿದರು.

— GIRISHA B

## ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ನೂತನ ಅಧ್ಯಕ್ಷರಾಗಿ ಬಸನಗೌಡ ದದ್ದಲ್ ನೇಮಕ - ಹಾರ್ದಿಕ ಅಭಿನಂದನೆಗಳು




ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ನೂತನ ಅಧ್ಯಕ್ಷರಾಗಿ ಬಸನಗೌಡ ದದ್ದಲ್ ನೇಮಕ - ಹಾರ್ದಿಕ ಅಭಿನಂದನೆಗಳು

ಬೆಂಗಳೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ನೂತನ ಅಧ್ಯಕ್ಷರಾಗಿ ನೇಮಕವಾದ ಶ್ರೀ ಬಸನಗೌಡ ದದ್ದಲ್ ಅವರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಲಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಅಭಿವೃದ್ಧಿ, ಶಿಕ್ಷಣ, ಆರೋಗ್ಯ, ಉದ್ಯೋಗ, ನೀರಾವರಿ ಸೇರಿದಂತೆ ಎಲ್ಲಾ ಕ್ಷೇತ್ರಗಳ ಪ್ರಗತಿಗೆ ಅವರ ನಾಯಕತ್ವದಲ್ಲಿ ಮಂಡಳಿ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸವನ್ನು ಕಾಂಗ್ರೆಸ್ ಮುಖಂಡರು ವ್ಯಕ್ತಪಡಿಸಿದ್ದಾರೆ.

ಅಭಿಮಾನಿಗಳು, ಕಾರ್ಯಕರ್ತರು ಹಾಗೂ ಹಿತೈಷಿಗಳು ಶುಭ ಹಾರೈಸಿ ಅಭಿನಂದನೆ ಸಲ್ಲಿಸುತ್ತಿದ್ದಾರೆ.

— Ningappa

## ಕರ್ನಾಟಕ ರಾಜ್ಯ ರೈತ ಸಂಘ ಮತ್ತು ರೈತ ಸೇನೆ ನಾಮಫಲಕಕ್ಕೆ ಮಾಲಾರ್ಪಣೆ



ದೇವದುರ್ಗ: ತಾಲುಕಿನ ಜಾಲಹಳ್ಳಿ ಹೋಬಳಿಯ ಯರಗುಡ್ಡ ಗ್ರಾಮದಲ್ಲಿ ಕನ್ನಡ ರಾಜ್ಯೋತ್ಸವ ಅಂಗವಾಗಿ ಇಂದು ಕರ್ನಾಟಕ ರಕ್ಷಣಾ ವೇದಿಕೆ(ಟಿ ಎ ನಾರಾಯಣ ಗೌಡ್ರ ಬಣ) ಕಾರ್ಯಕರ್ತರು ಕನ್ನಡಾಂಬೆ ಭಾವಚಿತ್ರಕ್ಕೆ ಪುಷ್ಪಾ ನಮನ ಸಲ್ಲಿಸಿ ನಂತರ ರಾಜ್ಯ ರೈತರ ಸಂಘದ ನಾಮಫಲಕಕ್ಕೆ ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ ಹಾಗೂ ಹೋಬಳಿ ಘಟಕ ಅಧ್ಯಕ್ಷ ತಮ್ಮಣ್ಣ ಹೇರುಂಡಿ ಹೋಬಳಿ ಘಟಕ ಉಪಾಧ್ಯಕ್ಷ ಅಮರೇಶ ಪಾಟೀಲ್ ಲಿಂಗದಳ್ಳಿ, ಮುಖಂಡ ಮಲ್ಲಿಕಾರ್ಜುನ ಅವರು ಮಾಲಾರ್ಪರ್ಣೆ ನೆರವೇರಿಸಿದರು.

ಇದೇ ಸಂದರ್ಭದಲ್ಲಿ ತಾಲ್ಲೂಕು ಘಟಕ, ಹೋಬಳಿ ಘಟಕ ಹಾಗೂ ಗ್ರಾಮ ಘಟಕದ ಕಾರ್ಯಕರ್ತರು ಶಾಲಾ ಮಕ್ಕಳು ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

— Ningappa

## ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ - ಯರಗುಡ್ಡದಲ್ಲಿ ಕನ್ನಡ ರಾಜ್ಯೋತ್ಸವ ಧ್ವಜಾರೋಹಣ - ಕರವೇ ತಾಲೂಕ ಅಧ್ಯಕ್ಷ ನಂದಪ್ಪ ಮಡ್ಡಿ ಕರೆ



ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ - ಯರಗುಡ್ಡದಲ್ಲಿ ಕನ್ನಡ ರಾಜ್ಯೋತ್ಸವ ಧ್ವಜಾರೋಹಣ

ರಾಯಚೂರು: ಕರ್ನಾಟಕದಲ್ಲಿ ಕನ್ನಡಿಗನೇ ಸಾರ್ವಭೌಮ ಈ ನೆಲದ ನಾಡು ನುಡಿ ಉಳುವಿಗಾಗಿ ಸಂಘಟಿತರಾಗೋಣ ಎಂದು ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ತಾಲೂಕ ಅಧ್ಯಕ್ಷ ನಂದಪ್ಪ ಮಡ್ಡಿ ಹೇಳಿದರು.

ಶನಿವಾರ ಯರಗುಡ್ಡ ಗ್ರಾಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣ ಗೌಡ ಬಣ) ಗ್ರಾಮ ಘಟಕದಿಂದ ನಡೆದ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ಕರ್ನಾಟಕದಲ್ಲಿ ಪ್ರತಿಯೊಬ್ಬರೂ ಕನ್ನಡ ಬಳಕೆ ಮಾಡಬೇಕು, ವ್ಯಾಪಾರ ವಹಿವಾಟು ನಾಮ ಫಲಕಗಳು ಕನ್ನಡದಲ್ಲಿಯೇ ಇರಬೇಕು, ಉದ್ಯೋಗದಲ್ಲೂ ಕನ್ನಡಿಗರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಕನ್ನಡ ಶಾಲೆಗಳ ಉಳಿವಿಗಾಗಿ ನಮ್ಮ ಸಂಘಟನೆ ರಾಜ್ಯಾಧ್ಯಕ್ಷ ನಾರಾಯಣ ಗೌಡ್ರ ನಿರಂತರವಾಗಿ ಹೋರಾಡುತ್ತಿದ್ದಾರೆ, ಕನ್ನಡಿಗರ ಮೇಲೆ ನಡೆಯುವ ದೌರ್ಜನ್ಯ ದಬ್ಬಾಳಿಕೆ ನಿಲ್ಲಬೇಕು ಎಂದರು.

ಪ್ರಧಾನ ಕಾರ್ಯದರ್ಶಿ ಗುರುನಾಥ ರೆಡ್ಡಿ, ಹೋಬಳಿ ಘಟಕ ಅಧ್ಯಕ್ಷ ತಮ್ಮಣ್ಣ ಹೇರುಂಡಿ, ಬಸವರಾಜ ಹೇರುಂಡಿ, ಬೀಮಣ್ಣ ಲಿಂಗದಹಳ್ಳಿ, ಅಮರೇಶ ಲಿಂಗದಳ್ಳಿ, ರಂಗಪ್ಪ ಬಂಡಿ, ಶಂಕರಗೌಡ ಮಾಲಿ ಪಾಟೀಲ್, ಮಲ್ಲಿಕಾರ್ಜುನ ಹಡಪದ್, ನಾರಾಯಣ ಪಾಟೀಲ್, ಚಂದ್ರಶೇಖರ, ವೆಂಕೋಬ ಎಸ್ಡಿಎಂಸಿ ಅಧ್ಯಕ್ಷರು, ಶಿವು ಕರಡಿ, ದೇವರಾಜ ಕರಡಿ, ಶಿವರಾಜ ಮಾ.ಪಾ, ಬಾಲಯ್ಯ ಪೂಜಾರಿ, ಹುಲಗಪ್ಪ ದಳಪತಿ, ಯಂಕಪ್ಪ ಕುದರೆ, ಗಂಗಣ್ಣ ಗಂಟಿ, ವೆಂಕಟೇಶ ಪೊಲೀಸ್ ಪಾಟೀಲ್, ದೇವೇಗೌಡ ಮಾಲಿ ಪಾಟೀಲ್, ಮಾನಪ್ಪ ಗಂಟಿ, ಚಿರಂಜೀವಿ, ಶಿವರಾಜ ಮಾಲಿ ಪಾಟೀಲ್ ಉಪಸ್ಥಿತರಿದ್ದರು.

— Ningappa

SPORTS

## ಭಾರತ 95 ರನ್ ಮುನ್ನಡೆ, ರಾಹುಲ್ 136 ರನ್ ಶತಕ, ನ್ಯೂಜಿಲೆಂಡ್ 368 ರನ್‌ಗಳ ವಿರುದ್ಧ ಮೊದಲ ಟೆಸ್ಟ್ ಮೂರನೇ ದಿನದಾಟ



ಭಾರತ vs ನ್ಯೂಜಿಲೆಂಡ್ ಮೊದಲ ಟೆಸ್ಟ್ ಪಂದ್ಯ ಮೂರನೇ ದಿನದಾಟವು ವೆಲ್ಲಿಂಗ್ಟನ್‌ನ ಬೇಸಿನ್ ರಿಸರ್ವ್‌ನಲ್ಲಿ ನಡೆಯಿತು. ನ್ಯೂಜಿಲೆಂಡ್ ಮೊದಲ ಇನ್ನಿಂಗ್ಸ್‌ನಲ್ಲಿ 368 ರನ್ ಗಳಿಸಿದ ನಂತರ, ಭಾರತ 463 ರನ್‌ಗಳೊಂದಿಗೆ 3 ವಿಕೆಟ್ ನಷ್ಟಕ್ಕೆ ಮುನ್ನಡೆ ಸಾಧಿಸಿತು, 95 ರನ್‌ಗಳ ಮುನ್ನಡೆ.


ಭಾರತದ 463/3 ನಲ್ಲಿ ಕನ್ನಡಿಗ ಕೆ.ಎಲ್. ರಾಹುಲ್ 136 ರನ್‌ಗಳ ಭರ್ಜರಿ ಶತಕ, ದೇವದತ್ ಪಡಿಕ್ಕಲ್ 80 ರನ್, ಶುಭಮನ್ ಗಿಲ್ 93* ಶತಕದ ಸನಿಹ, ರಿಷಭ್ ಪಂತ್ 37* ಮುಂತಾದ ಪ್ರದರ್ಶನಗಳು ಗಮನಾರ್ಹ. 3 ವಿಕೆಟ್ ನಷ್ಟಕ್ಕೆ ಮುನ್ನಡೆ.

ಈ ಪಂದ್ಯವು ಬೇಸಿನ್ ರಿಸರ್ವ್‌ನಲ್ಲಿ ನಡೆಯುತ್ತಿದ್ದು, ಸಂಪೂರ್ಣ ಸ್ಕೋರ್‌ಕಾರ್ಡ್ ESPNcricinfo ತಾಣದಲ್ಲಿ ವೀಕ್ಷಿಸಬಹುದು.

— Ganesh S

SPORTS

## ಬಾಂಗ್ಲಾದೇಶವಿರುದ್ಧ ಜಯದೊಂದಿಗೆ ದಕ್ಷಿಣ ಆಫ್ರಿಕಾ WTC ಅಂಕಪಟ್ಟಿಯಲ್ಲಿ ಮರುಅಗ್ರಸ್ಥಾನಕ್ಕೆ



ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡವು ಬಾಂಗ್ಲಾದೇಶ ವಿರುದ್ಧದ ಟೆಸ್ಟ್ ಸರಣಿಯಲ್ಲಿ 2-0 ಗೆಲುವು ಸಾಧಿಸಿ, ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ (WTC) ಅಂಕಪಟ್ಟಿಯಲ್ಲಿ ಮರುಅಗ್ರಸ್ಥಾನಕ್ಕೆ ಏರಿದೆ.

ಈ ಜಯದಿಂದ ದಕ್ಷಿಣ ಆಫ್ರಿಕಾ 12 ಅಂಕಗಳು ಸಂಗ್ರಹಿಸಿ, ಒಟ್ಟು 122 ಅಂಕಗಳೊಂದಿಗೆ ಟಾಪ್‌ನಲ್ಲಿ ನಿಂತಿದೆ. ಹಿಂದಿನ ಅಂಕಪಟ್ಟಿಯಲ್ಲಿ ಭಾರತ ಮೊದಲ ಸ್ಥಾನದಲ್ಲಿತ್ತು, ಆದರೆ ಈಗ ಅದು ಮೂರನೇ ಸ್ಥಾನಕ್ಕೆ ಕುಸಿದಿದೆ.


ಭಾರತ ತಂಡಕ್ಕೆ WTC ಫೈನಲ್‌ಗೆ ಪ್ರವೇಶಿಸುವ ಮಾರ್ಗ ಕಠಿಣವಾಗಿದೆ; ನ್ಯೂಜಿಲೆಂಡ್ ವಿರುದ್ಧದ ಸರಣಿಯನ್ನು ಗೆಲ್ಲುವುದು ಟೀಂ ಇಂಡಿಯಾಗೆ ಅನಿವಾರ್ಯವಾಗಿದೆ.

ಪ್ರಾರಂಭವಾಗಿಲ್ಲ, ಆದರೆ ಟೀಂ ಇಂಡಿಯಾ ಈಗಿಂದಲೇ ತಮ್ಮ ಪ್ರದರ್ಶನವನ್ನು ಹೆಚ್ಚಿಸಿ, ಅಂಕಗಳ ಅಂತರವನ್ನು ಮುಚ್ಚಬೇಕಾಗಿದೆ.

— Ganesh S

SPORTS

## ಕೆ.ಎಲ್. ರಾಹುಲ್: ವೆಲ್ಲಿಂಗ್ಟನ್ ಟೆಸ್ಟ್‌ನಲ್ಲಿ ಶತಕ ಬಾರಿಸಿ SENA ದೇಶಗಳಲ್ಲಿ ಮೊದಲ ಭಾರತೀಯ ಆರಂಭಿಕ ಬ್ಯಾಟರ್



ಕೆ.ಎಲ್. ರಾಹುಲ್ ಅವರು ವೆಲ್ಲಿಂಗ್ಟನ್ ಟೆಸ್ಟ್‌ನಲ್ಲಿ ಶತಕ ಬಾರಿಸಿ, ದಕ್ಷಿಣ ಆಫ್ರಿಕಾ, ಇಂಗ್ಲೆಂಡ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ (SENA) ಈ ನಾಲ್ಕು ದೇಶಗಳಲ್ಲಿ ಟೆಸ್ಟ್ ಶತಕ ಸಿಡಿಸಿದ ಭಾರತದ ಮೊದಲ ಆರಂಭಿಕ ಬ್ಯಾಟರ್ ಎಂಬ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ.

ಈ ಸಾಧನೆ SENA ದೇಶಗಳ ವಿರುದ್ಧದ ಟೆಸ್ಟ್ ಪಂದ್ಯಗಳಲ್ಲಿ ರಾಹುಲ್ ಅವರ ನಿರಂತರ ಪ್ರದರ್ಶನವನ್ನು ಪ್ರತಿಬಿಂಬಿಸುತ್ತದೆ. ವೆಲ್ಲಿಂಗ್ಟನ್‌ನಲ್ಲಿ ನಡೆದ ಟೆಸ್ಟ್ ಪಂದ್ಯದಲ್ಲಿ ಅವರು ಶತಕ ಬಾರಿಸಿ, ತಂಡದ ಜಯಕ್ಕೆ ಪ್ರಮುಖ ಕೊಡುಗೆ ನೀಡಿದರು.

ಈ ದಾಖಲೆ ಭಾರತೀಯ ಕ್ರಿಕೆಟ್‌ಗೆ ಹೊಸ ಮೈಲುಗಲ್ಲು, ಮತ್ತು ರಾಹುಲ್ ಅವರ ಪ್ರತಿಭೆ ಮತ್ತು ಪರಿಶ್ರಮವನ್ನು ಮತ್ತೊಮ್ಮೆ ಸಾಬೀತುಪಡಿಸಿದೆ. ಮುಂದಿನ ಪಂದ್ಯಗಳಲ್ಲಿ ಅವರ ಪ್ರದರ್ಶನವನ್ನು ನಿರೀಕ್ಷಿಸಲಾಗಿದೆ.

— Ganesh S

SPORTS

## ರಾಹುಲ್ SENA ದೇಶಗಳಲ್ಲಿ ಶತಕಗಳೊಂದಿಗೆ ಎಲೈಟ್ ಕ್ಲಬ್‌ಗೆ ಸೇರ್ಪಡೆ



ರಾಹುಲ್ ಅವರು SENA ದೇಶಗಳಲ್ಲಿ ಶತಕ ಗಳಿಸಿ, ಕ್ರಿಕೆಟ್ ಕ್ಷೇತ್ರದ ಎಲೈಟ್ ಕ್ಲಬ್‌ಗೆ ಪ್ರವೇಶಿಸಿದ್ದಾರೆ. ಈ ಕ್ಲಬ್‌ಗೆ ಈಗ ಸಚಿನ್ ತೆಂಡೂಲ್ಕರ್, ರಾಹುಲ್ ದ್ರಾವಿಡ್, ವಿರಾಟ್ ಕೊಹ್ಲಿ ಮತ್ತು ರಿಷಭ್ ಪಂತ್ ಸೇರಿದ್ದಾರೆ.

SENA ದೇಶಗಳಲ್ಲಿ ಸಾಧಿಸಿದ ಶತಕಗಳು ರಾಹುಲ್ ಅವರ ಪ್ರತಿಭೆಯನ್ನು ಮತ್ತಷ್ಟು ದೃಢಪಡಿಸುತ್ತವೆ. ಈ ಸಾಧನೆ ಮೂಲಕ ಅವರು ಕ್ರಿಕೆಟ್ ಪ್ರೇಮಿಗಳಿಗೆ ಹೊಸ ಉತ್ಸಾಹವನ್ನು ನೀಡಿದ್ದಾರೆ.

ಈ ಘಟನೆ ಕ್ರಿಕೆಟ್ ಜಗತ್ತಿನಲ್ಲಿ ಮಹತ್ವದ ಮೈಲಿಗಲ್ಲು ಎಂದು ಪರಿಗಣಿಸಲಾಗುತ್ತಿದೆ, ಏಕೆಂದರೆ ರಾಹುಲ್ ಅವರ ಸೇರ್ಪಡೆ ಎಲೈಟ್ ಕ್ಲಬ್‌ನ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ.

— Ganesh S